ಸಂಪುಟ 01 | ಸಂಚಿಕೆ 34 | ಸೋಮವಾರ 15 ಡಿಸೆಂಬರ್ 2025 | ಪುಟ 4 | ಬೆಲೆ–2 ರೂ.

ಇರ್ಫಾನ್ ಕೆ
ಸಂಪಾದಕರು

M A ವಹಾಬ್
ಪ್ರಧಾನ ಸಂಪಾದಕರು

# ನೈಜ್ಯ ದೆಸೆ

NAIJYA DESE

ಸತ್ಯದ ದಿಕ್ಕು TRUE PATH

ಕನ್ನಡ ದಿನ ಪತ್ರಿಕೆ

ಸಿಂಧನೂರು, ಮಸ್ಕಿ
ಮಾನ್ವಿ, ಲಿಂಗಸೂರು,
ರಾಯಚೂರ,ದೇವದುರ್ಗ
ಬಳ್ಳಾರಿ, ಕೊಪ್ಪಳ
ಯಾದಗಿರಿ, ಕಲಬುರ್ಗಿ,
ಬೀದರ, ವಿಜಯಪುರ.
ಗದಗ, ವಿಜಯನಗರ.
ಏಕಕಾಲಕ್ಕೆ ಪ್ರಕಟಣೆ

REGIONAL KANNADA DAILY MORNING

RNI code: KNKAN/25/A3581 ಮೋ: 9902277588, 9880707587, 9008787586 naijyadese@gmail.com

## ಈ ದಿನದ ವಿಶೇಷ

**01.ನವಜಾತ ಶಿಶು ಆರೈಕೆ ಸಪ್ತಾಹ (Newborn Care Week)**

ನವಜಾತ ಶಿಶು ಆರೈಕೆ ಸಪ್ತಾಹವು ಭಾರತದಲ್ಲಿ ಪ್ರತಿ ವರ್ಷ ನವೆಂಬರ್ 15 ರಿಂದ 21 ರವರೆಗೆ ಆಚರಿಸಲಾಗುವ ಒಂದು ರಾಷ್ಟ್ರೀಯ ಆರೋಗ್ಯ ಕಾರ್ಯಕ್ರಮವಾಗಿದ್ದು, ಶಿಶು ಮರಣವನ್ನು ತಡೆಯಲು ಮತ್ತು ಮಗುವಿನ ಬದುಕುಳಿಯುವಿಕೆ ಹಾಗೂ ಬೆಳವಣಿಗೆಗೆ ಬೇಕಾದ ಸರಿಯಾದ ಆರೈಕೆ, ಪೋಷಣೆ, ಸುರಕ್ಷಿತ ನಿದ್ರೆ ಮತ್ತು ಸ್ತನ್ಯಪಾನದ ಮಹತ್ವದ ಬಗ್ಗೆ ಪೋಷಕರಿಗೆ ಮತ್ತು ಸಮುದಾಯಕ್ಕೆ ಜಾಗೃತಿ ಮೂಡಿಸುತ್ತದೆ. ಈ ವಾರದಲ್ಲಿ ಆರೋಗ್ಯ ಅಧಿಕಾರಿಗಳು ಶಿಶು ಆರೈಕೆಯ ವಿವಿಧ ಅಂಶಗಳ ಬಗ್ಗೆ ಮಾಹಿತಿ ನೀಡುತ್ತಾರೆ.

**02. ಬಿಲ್ ಆಫ್ ರೈಟ್ಸ್ ಡೇ (Bill of Rights Day)**

1791ರಲ್ಲಿ ಅಮೇರಿಕನ್ ಸಂವಿಧಾನದ ಮೊದಲ 10 ತಿದ್ದುಪಡಿ ವಿಧಿಗಳು (Bill of Right) ಅಂಗೀಕರಿಸಲ್ಪಟ್ಟ ದಿನ.ಮಾತಿನ ಸ್ವಾತಂತ್ರ್ಯ, ಧರ್ಮ ಸ್ವಾತಂತ್ರ್ಯ, ಮಾಧ್ಯಮ ಸ್ವಾತಂತ್ರ್ಯ, ನ್ಯಾಯ ವ್ಯವಸ್ಥೆಯ ಹಕ್ಕುಗಳು ಸೇರಿದಂತೆ ನಾಗರಿಕರ ಮೂಲ ಹಕ್ಕುಗಳ ಸ್ಥಾಪನೆಯ ದಿನ.ಶಾಲೆಗಳು ಮತ್ತು ಸರ್ಕಾರಿ ಸಂಸ್ಥೆಗಳಲ್ಲಿ ಸಂವಿಧಾನ ಹಾಗೂ ನಾಗರಿಕ ಹಕ್ಕುಗಳ ಬಗ್ಗೆ ಜಾಗೃತಿ ಕಾರ್ಯಕ್ರಮಗಳು.ನಾಗರಿಕ ಹಕ್ಕುಗಳ ಮಹತ್ವವನ್ನು ಹತ್ತಿರದಿಂದ ಪರಿಚಯಿಸುವ ದಿನ.

**3.ಅಂತರರಾಷ್ಟ್ರೀಯ ಟೀ ಡೇ (International Tea Day)**

ಚಹಾ ತೋಟ ಕಾರ್ಮಿಕರ ಹಕ್ಕುಗಳನ್ನು ರಕ್ಷಿಸಲು ಚಹಾ ಉತ್ಪಾದನೆ, ಮಾರುಕಟ್ಟೆ ಮತ್ತು ಆರ್ಥಿಕ ಪರಿಣಾಮಗಳ ಬಗ್ಗೆ ಜಾಗೃತಿ ಮೂಡಿಸಲು ಚಹಾ ಬೆಲೆ, ರೈತರ ಸಮಸ್ಯೆಗಳು, ತೋಟಗಳಲ್ಲಿ ಕೆಲಸ ಮಾಡುವ ಕಾರ್ಮಿಕರ ಪರಿಸ್ಥಿತಿ ಕುರಿತ ಚರ್ಚೆಗಳು ಸೋಷಲ್ ಮೀಡಿಯಾ ಮತ್ತು ಸ್ಥಳೀಯ ಸಮಾಜ ಮಟ್ಟದಲ್ಲಿ ಚಹಾ ಸಂಸ್ಕೃತಿಯ ಆಚರಣೆ

## ಸುಭಾಷಿತ

ಗುಂಪಿನಿಂದ ಬೇರೆಯಾಗಿ ಎತ್ತರದಲ್ಲಿ
ನಿಲ್ಲುವುದಕ್ಕೆ ನೀವು ಮನಸ್ಸು ಮಾಡಿದ್ದರೆ,
ಗುಂಪಿನಿಂದ ತೂರಿಬರುವ ಕಲ್ಲುಗಳಿಗೆ ಎದೆ
ಕೊಡಲು ಸಿದ್ಧರಾಗಿರಬೇಕು.

– ವಿಕ್ರಮ್ ಸಾರಾಭಾಯ್

# ರಾಜ್ಯದ ಪ್ರಾಥಮಿಕ ಶಾಲಾ ಶಿಕ್ಷಕರಿಗೆ 6–7ನೇ ತರಗತಿ ಬೋಧನೆಗೆ ಅವಕಾಶ : ಸರ್ಕಾರದಿಂದ ಮಹತ್ವದ ಆದೇಶ

❑ ನೈಜ್ಯ ದೆಸೆ ನ್ಯೂಸ್

ಬೆಂಗಳೂರು : ಅಗತ್ಯ ವಿಷಯಗಳಲ್ಲಿ ಪದವಿ ಹೊಂದಿದ ಶಿಕ್ಷಕರು 6, 7ನೇ ತರಗತಿಗೆ ಬೋಧಿಸಲು ಅರ್ಹರು ಎಂದು ರಾಜ್ಯ ಸರ್ಕಾರ ಗೆಜೆಟ್ ಅಧಿಸೂಚನೆ ಹೊರಡಿಸಿದೆ.ಕರ್ನಾಟಕ ಶಿಕ್ಷಣ ಇಲಾಖೆ ಸೇವೆಗಳು (ಸಾರ್ವಜನಿಕ ಶಿಕ್ಷಣ ಇಲಾಖೆ) (ನೇಮಕಾತಿ) (ತಿದ್ದುಪಡಿ) ನಿಯಮಗಳು, 2025ನ್ನು ಕರ್ನಾಟಕ ನಾಗರಿಕ ಸೇವೆಗಳು ಅಧಿನಿಯಮ 1978 (1990ರ ಕರ್ನಾಟಕ ಅಧಿನಿಯಮ 14) ರ ಕಲಂ–3 ರ ಉಪ ಕಲಂ (2) ರ ಖಂಡ (ಎ) ರಲ್ಲಿ ಅಗತ್ಯಪಡಿಸಿರುವಂತೆ ಕರ್ನಾಟಕ ರಾಜ್ಯ ಪತ್ರದ ವಿಶೇಷ ಸಂಚಿಕೆಯ ಭಾಗ–ಖಗಿಂ (ಸಂಖ್ಯೆ: 659) ರಲ್ಲಿ ಪ್ರಕಟಿಸಿ ಅದರಿಂದ ಬಾಧಿತರಾಗಲು ಸಂಭವವಿರುವ ಎಲ್ಲಾ ವ್ಯಕ್ತಿಗಳಿಂದ ಆಕ್ಷೇಪಣೆ ಮತ್ತು ಸಲಹೆಗಳನ್ನು ಆಹ್ವಾನಿಸಿ ಪ್ರಕಟಿಸಲಾಗಿದೆ. ಸದರಿ ವಿಶೇಷ ರಾಜ್ಯಪತ್ರವನ್ನು ದಿನಾಂಕ: 17.10.2025 ರಂದು ಸಾರ್ವಜನಿಕರಿಗೆ ಲಭ್ಯವಾಗುವಂತೆ ಮಾಡಿರುವುದರಿಂದ;ಮತ್ತು ಸದರಿ ಕರಡು ತಿದ್ದುಪಡಿ ನಿಯಮಗಳ



ಬಗ್ಗೆ ಸಾರ್ವಜನಿಕರಿಂದ ಸ್ವೀಕೃತವಾಗಿರುವ ಆಕ್ಷೇಪಣೆ ಮತ್ತು ಸಲಹೆಗಳನ್ನು ರಾಜ್ಯ ಸರ್ಕಾರವು ಪರಿಗಣಿಸಿದೆ. ಈಗ ಕರ್ನಾಟಕ ನಾಗರಿಕ ಸೇವೆಗಳು ಅಧಿನಿಯಮ 1978 (1990ರ ಕರ್ನಾಟಕ ಅಧಿನಿಯಮ 14) ರ 8ನೇ ಪ್ರಕರಣದೊಂದಿಗೆ ಓದಿಕೊಂಡು 3ನೇ ಪ್ರಕರಣದ (1)ನೇ ಉಪ ಪ್ರಕರಣದ ಮೂಲಕ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸಿ, ಕರ್ನಾಟಕ ಸರ್ಕಾರವು ಈ ಮೂಲಕ ಈ ಕೆಳಕಂಡಂತೆ ನಿಯಮಗಳನ್ನು ರಚಿಸುತ್ತದೆ. ನಿಯಮಗಳು ಶೀರ್ಷಿಕೆ ಮತ್ತು ಪ್ರಾರಂಭ: (1) ಈ ನಿಯಮಗಳನ್ನು ಕರ್ನಾಟಕ ಶಿಕ್ಷಣ ಇಲಾಖೆ ಸೇವೆಗಳು (ಸಾರ್ವಜನಿಕ ಶಿಕ್ಷಣ ಇಲಾಖೆ) (ನೇಮಕಾತಿ) (ತಿದ್ದುಪಡಿ) ನಿಯಮಗಳು, 2025 ಎಂದು ಕರೆಯತಕ್ಕದ್ದು. (2) ಈ ನಿಯಮಗಳು ಕರ್ನಾಟಕ ರಾಜ್ಯಪತ್ರದಲ್ಲಿ ಅಂತಿಮವಾಗಿ ಪ್ರಕಟಗೊಂಡ ದಿನಾಂಕದಿಂದ ಜಾರಿಯಾಗತಕ್ಕದ್ದು. ಕೋಷ್ಟಕದ ತಿದ್ದುಪಡಿ: ಕರ್ನಾಟಕ ಶಿಕ್ಷಣ ಇಲಾಖೆ ಸೇವೆಗಳು (ಸಾರ್ವಜನಿಕ ಶಿಕ್ಷಣ ಇಲಾಖೆ) (ನೇಮಕಾತಿ) ನಿಯಮಗಳು, 1967ರ ಕೋಷ್ಟಕದಲ್ಲಿ "ಶ್ರೇಣಿ II ಪತ್ರಾಂಕಿತವಲ್ಲದ ಹುದ್ದೆಗಳು" ಶೀರ್ಷಿಕೆಯಡಿಯಲ್ಲಿ ಕ್ರಮ ಸಂಖ್ಯೆ: 66 ರಲ್ಲಿನ ಪ್ರಾಥಮಿಕ ಶಾಲಾ ಶಿಕ್ಷಕರು ತರಗತಿ 1 ರಿಂದ 5 ವರ್ಗದ ಅಂಕಣ ಸಂಖ್ಯೆ (3) ರಲ್ಲಿ :–ಇರುವ ಟಿಪ್ಪಣಿಯನ್ನು ಟಿಪ್ಪಣಿ–1 ಎಂದು ಸಂಖ್ಯಿಕರಿಸುವುದು: ಮತ್ತು ಅದರಂತೆ ಸಂಖ್ಯಿಕರಿಸಿದ ಟಿಪ್ಪಣಿ–1 ರ ನಂತರ ಈ ಕೆಳಗಿನಂತೆ ಸೇರ್ಪಡೆಗೊಳಿಸತಕ್ಕದ್ದು. ಅಂದರೆ, "ಟಿಪ್ಪಣಿ–2 1 ರಿಂದ 5ನೇ ತರಗತಿಗೆ ಬೋಧಿಸುವ ಪ್ರಾಥಮಿಕ ಶಾಲಾ ಶಿಕ್ಷಕರು NCTE ಮಾರ್ಗಸೂಚಿಗಳಲ್ಲಿ ನಿರ್ಧಿಷ್ಟಪಡಿಸಿದಂತೆ ಮತ್ತು ಪದವೀಧರ ಪ್ರಾಥಮಿಕ ಶಿಕ್ಷಕರ ಹುದ್ದೆಗೆ ಜಾರಿಯಲ್ಲಿರುವ ವೃಂದ ಮತ್ತು ನೇಮಕಾತಿ ನಿಯಮಗಳಲ್ಲಿರುವಂತೆ ಅಗತ್ಯ ವಿಷಯಗಳಲ್ಲಿ ಪದವಿಯನ್ನು ಹೊಂದಿದ್ದಲ್ಲಿ, 6 ಮತ್ತು 7 ನೇ ತರಗತಿಗೆ ಬೋಧಿಸಲು ಅರ್ಹರಾಗತಕ್ಕದ್ದು.

## ಸರ್ಕಾರಿ ಶಾಲೆಯ 24 ಮಕ್ಕಳಿಗೆ ವಿಮಾನದಲ್ಲಿ ಶೈಕ್ಷಣಿಕ ಪ್ರವಾಸ ಭಾಗ್ಯ




❑ ನೈಜ್ಯ ದೆಸೆ ನ್ಯೂಸ್

ಕೊಪ್ಪಳ: ತಾಲ್ಲೂಕಿನ ಬಹದ್ದೂರಬಂಡಿ ಶಾಲೆಯ ಮುಖ್ಯೋಪಾಧ್ಯಾಯ ಬೀರಪ್ಪ ಅಂಡಗಿ ಅವರು ಸ್ವಂತ ಹಣದಿಂದ ತಮ್ಮ ಶಾಲೆಯ 24 ವಿದ್ಯಾರ್ಥಿಗಳನ್ನು ವಿಮಾನದಲ್ಲಿ ಶೈಕ್ಷಣಿಕ ಪ್ರವಾಸಕ್ಕೆ ಕರೆದುಕೊಂಡು ಹೋಗಲು ಸಿದ್ಧತೆ ಮಾಡಿಕೊಂಡಿದ್ದಾರೆ. ವಿಮಾನದಲ್ಲಿ ಪ್ರವಾಸಕ್ಕೆ ಕರೆದುಕೊಂಡು ಹೋಗುವ ವಿದ್ಯಾರ್ಥಿಗಳ ಆಯ್ಕೆ ಪಾರದರ್ಶಕವಾಗಿ ಇರಬೇಕು ಎನ್ನುವ ಕಾರಣಕ್ಕೆ ಅವರು ಕಳೆದ ಏಪ್ರಿಲ್‌ನಲ್ಲಿ ಬೇರೆ ಬೇರೆ ಶಾಲೆಗಳ ಶಿಕ್ಷಕರನ್ನು ನೇಮಕ ಮಾಡಿ ಅವರಿಂದಲೇ ಪ್ರಶ್ನೆಪತ್ರಿಕೆ ಸಿದ್ಧಪಡಿಸಿ ಪ್ರವಾಸಕ್ಕೆ ತೆರಳುವ ವಿದ್ಯಾರ್ಥಿಗಳ ಆಯ್ಕೆಗೆ ಪರೀಕ್ಷೆ ನಡೆಸಿದ್ದರು. ಪರೀಕ್ಷೆಗೆ 220 ವಿದ್ಯಾರ್ಥಿಗಳು ಹಾಜರಾಗಿದ್ದು, 5ರಿಂದ 8ನೇ ತರಗತಿ ತನಕ ಪ್ರತಿ ತರಗತಿಯಿಂದ ತಲಾ ಆರು ವಿದ್ಯಾರ್ಥಿಗಳನ್ನು ಆಯ್ಕೆ ಮಾಡಿ ಪ್ರವಾಸಕ್ಕೆ ಕರೆದುಕೊಂಡು ಹೋಗಲಾಗುತ್ತಿದೆ. ಬಳ್ಳಾರಿಯ ಜಿಂದಾಲ್ ವಿಮಾನ ನಿಲ್ದಾಣದಿಂದ ಡಿ. 26ರಂದು ಬೆಂಗಳೂರಿಗೆ ಮಕ್ಕಳು ತೆರಳುವರು. ವಿದ್ಯಾರ್ಥಿಗಳಿಂದ ಯಾವುದೇ ಹಣ ಸಂಗ್ರಹ ಮಾಡದೆ ಮುಖ್ಯೋಪಧ್ಯಾಯರೇ ವಿಮಾನ ಪ್ರಯಾಣದ ವೆಚ್ಚ, ಊಟ ಹಾಗೂ ವಸತಿ ಸೌಲಭ್ಯವನ್ನು ಭರಿಸಲಿದ್ದಾರೆ.'ವಿದ್ಯಾರ್ಥಿಗಳ ಪ್ರಯಾಣ ಹಾಗೂ ಅವರಿಗಾಗಿ ಮಾಡುವ ವೆಚ್ಚ ಸೇರಿ ಒಟ್ಟು ₹4 ಲಕ್ಷ ಆಗಲಿದೆ.ವಿದ್ಯಾರ್ಥಿಗಳಲ್ಲಿ ಸ್ಪರ್ಧಾ ಮನೋಭಾವನೆ ಬೆಳೆಯಬೇಕು, ಸರ್ಕಾರಿ ಶಾಲೆಯ ಮಕ್ಕಳಿಗೂ ವಿಮಾನಯಾನದ ಅನುಭವ ದೊರೆಯಬೇಕು ಎನ್ನುವ ಕಾರಣಕ್ಕಾಗಿ ಸ್ವಂತ ಖರ್ಚಿನಲ್ಲಿ ಪ್ರಯಾಣಕ್ಕೆ ಕರೆದುಕೊಂಡು ಹೋಗುತ್ತಿದ್ದೇನೆ' ಎಂದು ವಿಕಲಚೇತನ ನೌಕರರ ಸಂಘದ ರಾಜ್ಯಾಧ್ಯಕ್ಷರೂ ಆದ ಬೀರಪ್ಪ ಅಂಡಗಿ ತಿಳಿಸಿದ್ದಾರೆ.

## ಅಪಘಾತ ಜಾಗೃತಿ ಕಾರ್ಯದಲ್ಲಿ ತೊಡಗಿದ ಅಭಿನಂದನ್ ಸಂಸ್ಥೆ

❑ ನೈಜ್ಯ ದೆಸೆ ನ್ಯೂಸ್

ಮಸ್ಕಿಯ ಅಭಿನಂದನ್ ಸಂಸ್ಥೆಯು ಒಂದು ವಾರ ಬಿಡದಂತೆ ನಿರಂತರವಾಗಿ ಮಾಡಿಕೊಂಡು ಬರುತ್ತಿರುವ ಸಂಡೆ ಫಾರ್ ಸೋಷಿಯಲ್ ವರ್ಕ್ ಸೇವಾ ಕಾರ್ಯದ ಭಾಗವಾಗಿ ಈ ವಾರದ 232ನೇ ಸೇವಾ ಕಾರ್ಯವನ್ನು ಸ್ಪೀಡ್ ಬ್ರೇಕರ್ ಗಳಿಗೆ ಬಣ್ಣವನ್ನು ಹಚ್ಚುವ ಮೂಲಕ ನೆರವೇರಿಸಲಾಯಿತು. ರಾತ್ರಿವೇಳೆ ಪ್ರಯಾಣಿಕರಿಗೆ ರಸ್ತೆಯ ಸ್ಪೀಡ್ ಬ್ರೇಕರ್ ಗಳು ಕಾಣದೆ ಸಾಕಷ್ಟು ಅಪಘಾತಗಳು ಸಂಭವಿಸುತ್ತಿದ್ದು ಇದರಿಂದಾಗಿ ಮಸ್ಕಿಯ ನಾಗರಿಕರು ಅಭಿನಂದನ್ ಸಂಸ್ಥೆಗೆ ಕರೆ ಮಾಡಿ ತಿಳಿಸಿದ ಕಾರಣ 232ನೇ ಸಂಡೆ ಫಾರ್ ಸೇವಾ ಕಾರ್ಯದ ಮೂಲಕ ಸ್ಪೀಡ್ ಬ್ರೇಕರ್ ಗೆ



ಬಣ್ಣವನ್ನು ಹಚ್ಚುವ ಮೂಲಕ ಪ್ರಯಾಣಿಕರಿಗೆ ಸ್ಪೀಡ್ ಬ್ರೇಕರ್ ಕಾಣುವಂತೆ ಮಾಡಿ ಅಪಘಾತ ತಡೆಯುವ ನಿಟ್ಟಿನಲ್ಲಿ ಕಾರ್ಯ ಕೈಗೊಳ್ಳಲಾಯಿತು. ಈ ಸೇವಾ ಕಾರ್ಯದಲ್ಲಿ ಅಭಿನಂದನ್ ಸಂಸ್ಥೆಯ ಸಂಸ್ಥಾಪಕರಾದ ರಾಮಣ್ಣ ಹಂಪರಗುಂದಿ ಹಾಗೂ ಪದಾಧಿಕಾರಿಗಳಾದ ಜಾಫರ್ ಮಿಯಾ, ಮಲ್ಲಿಕಾರ್ಜುನ ಬಡಿಗೇರ್, ರವಿಚಂದ್ರ, ಕಿಶೋರ್ ಮತ್ತು ಅಭಿನಂದನ್ ಸ್ಫೂರ್ತಿ ಧಾಮದ ಮಕ್ಕಳು ಪಾಲ್ಗೊಂಡಿದ್ದರು.

## ಯುವ ಪತ್ರಕರ್ತ ಲಿಂಗರಾಜ್ ತಡಕಲ್ ಇವರಿಗೆ " ಆರೂಢ ಶ್ರೀ ಪ್ರಶಸ್ತಿ ಪ್ರಧಾನ

❑ ನೈಜ್ಯ ದೆಸೆ ನ್ಯೂಸ್

ಮಸ್ಕಿ : ತಾಲೂಕಿನ ಮಲ್ಲದಗುಡ್ಡ ಗ್ರಾಮದ ಶ್ರೀ ಆರೂಢ ಶ್ರೀ ಅಯ್ಯಪ್ಪ ತಾತನ 44ನೇ ಸೇವಾ ಕಾರ್ಯಕ್ರಮದ ಅಂಗವಾಗಿ ಶ್ರೀಮಠದಲ್ಲಿ ಶನಿವಾರ ಸಂಜೆ ನಡೆದ ಗಾಯನ ಹಾಗೂ ಜಾನಪದ ಸಂಗೀತ ಕಾರ್ಯಕ್ರಮದಲ್ಲಿ ಮಾನ್ವಿ ತಾಲೂಕು ತಡಕಲ್ ಗ್ರಾಮದ ಸಂಜೆ ವರದಿ ಹಾಗೂ ಚಂದ್ರಪಥ ಕನ್ನಡ ದಿನಪತ್ರಿಕೆಯ ಯುವ ಪತ್ರಕರ್ತರಾದ ಲಿಂಗರಾಜ ಇವರಿಗೆ ಪತ್ರಿಕಾ ಮಾಧ್ಯಮ ಸಮಾಜ ಸೇವೆ ಧಾರ್ಮಿಕ ಸೇವಾ ಕಾರ್ಯದಲ್ಲಿ ಮಾಡುತ್ತಿರುವ ಉತ್ತಮ ಸಾಧನೆ ಹಾಗೂ ಸೇವಾ ಕಾರ್ಯಕ್ಕೆ ಮೆಚ್ಚುಗೆ ವ್ಯಕ್ತಪಡಿಸಿ ಆರೂಢ ಅಯ್ಯಪ್ಪ ಸ್ವಾಮಿ



ದೇವಸ್ಥಾನ ಸೇವಾ ಸಮಿತಿ ವತಿಯಿಂದ ಶ್ರೀ ಮಠದ ಪೀಠಾಧಿಪತಿಗಳಾದ ಶ್ರೀ ಆರೂಢ ಅಯ್ಯಪ್ಪ ತಾತನವರು ಪ್ರಶಸ್ತಿ ಫಲಕ ನೀಡಿ ಸನ್ಮಾನಿಸಿ ಆಶೀರ್ವದಿಸಿದರು. ನಂತರ ಇಂತಹ ಯುವ ಸಮೂಹದ ಯುವಕರು ಸಾಮಾಜಿಕ ಆರ್ಥಿಕ ಶೈಕ್ಷಣಿಕ ಧಾರ್ಮಿಕ ರಾಜಕೀಯ ಮಾಧ್ಯಮ ರಂಗದಲ್ಲಿ ನಿಸ್ಪಕ್ಷಪಾತ ಸೇವೆ ಸಲ್ಲಿಸಿ ಉನ್ನತ ಮಟ್ಟಕ್ಕೆ ಸಾಗಬೇಕು ಇವರು ಇನ್ನೂ ರಾಷ್ಟ್ರೀಯ ಮಾಧ್ಯಮಕ್ಕೆ ಪಯಣ ಮಾಡುವಂತೆ ಬೆಳೆಯಬೇಕು ಎಂದು ಹಾರೈಸಿದರು.

# ಸಿಂಧನೂರಿನ ಬಡ್ಡಿ ರಹಿತ ಅನುಗ್ರಹ ಸಹಕಾರಿ ಸಂಘ ನಮ್ಮ ತಾಲೂಕಿಗೆ ಒಂದು ಅಳಿಸಲಾಗದ ಇತಿಹಾಸ – MLC ಬಸನಗೌಡ ಬಾದರ್ಲಿ



❑ ನೈಜ್ಯ ದೆಸೆ ನ್ಯೂಸ್

ಸಿಂಧನೂರು: ಅನುಗ್ರಹ ಸೌಹಾರ್ದ ಸಹಕಾರಿ ಸಂಘ ಶನಿವಾರ ಸಿಂಧನೂರಿನ ಕಾಟಿಬೇಸ್ ನಲ್ಲಿ ಉದ್ಘಾಟನೆಗೊಂಡಿತು. ಜಮಾಅತೆ ಇಸ್ಲಾಮಿ ಹಿಂದ್ ರಾಜ್ಯಾ ಕಾರ್ಯದರ್ಶಿ ಮುಹಮ್ಮದ್ ಯೂಸೂಫ್ ಕನ್ನಿ ಉದ್ಘಾಟಿಸಿದರು ಕಾರ್ಯಕ್ರಮ ಮಸ್ಜಿದ್ ಏ ಹುದಾ ಸಭಾಂಗಣದಲ್ಲಿ ಜರುಗಿತು ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಗಳಾಗಿ ಬಸನಗೌಡ ಬಾದರ್ಲಿ,ಪಂಪನಗೌಡ ಬಾದರ್ಲಿ,ಮಾಜಿ ಸಚಿವ ವೆಂಕಟರಾವ್ ನಾಡಗೌಡ, ಬಿಜೆಪಿ ಮುಖಂಡ ಕೆ ಕರಿಯಪ್ಪ ,ಮೈಕ್ರೋ ಫೈನಾನ್ಸ್ ಸಹುಲತ್ ಸೊಸೈಟೀಸ್ ನ ಸಿಇಒ ಒಸಾಮಾ ಖಾನ್,ಸೌಹಾರ್ದ ಅಭಿವೃದ್ಧಿ ಅಧಿಕಾರಿ ನಟರಾಜ, ಮೌಲಾನಾ ಮುಹಮ್ಮದ್ ತಾಜೀಮುದ್ದೀನ್ ಇಮಾಮ್ –ಓ–ಖತೀಬ್, ಕಾಂಗ್ರೆಸ್ ಮುಖಂಡ ಸೈಯದ್ ಹಾರೂನ್ ಸಾಹೇಬ್ ಜಾಗೀರ್ದಾರ,ವಕೀಲ ಬಾಬರ ಪಾಷ, ಮಿಲಾಪ್ ಶಾದಿ ಮಹಲ್ ಅಧ್ಯಕ್ಷರಾದ ಖಾಜಿ ಜಿಲಾನಿ ಪಾಷಾ, ಲೆಕ್ಕ ಪರಿಶೋಧನಾ ಇಲಾಖೆಯ ಸಹಾಯಕ ನಿರ್ದೇಶಕ ಮಹೆಬೂಬ ಆರ್, ಮೌಲಾನಾ ಸೈಯ್ಯದ್ ಬೈಸರ್ ಖಾದ್ರಿ, ಅಲ್ತಾಫ್ ಸಾಬ್ ಸಾಹುಕಾರ ಮುಳ್ಳೂರು, ಅನ್ವರ್ ಪಾಶಾ ಉಮರಿ, ಇಮ್ತಿಯಾಜ್ ಬೇಗ್, ಜಮಾತೆ ಇಸ್ಲಾಮ್ ಹಿಂದ್ ಸಿಂಧನೂರಿನ ಅಧ್ಯಕ್ಷ ಟಿ ಹುಸೇನ್ ಸಾಬ್ ಹಾಗೂ ಪದಾಧಿಕಾರಿಗಳು ಹಾಗೂ ಸ್ಟೂಡೆಂಟ್ ಇಸ್ಲಾಮಿಕ್ ಆರ್ಗನೈಜೇಷನ್ ಸಿಂಧನೂರಿನ ಅಧ್ಯಕ್ಷ ಇಮ್ತಿಯಾಜ್ ಕಾರ್ಯದರ್ಶಿ ಅಫ್ಜಲ್,ಸಂಘಟನೆಕಾರ ನೂರ್ ಹಾಗೂ ವಿದ್ಯಾರ್ಥಿ ಸಂಘಟನೆಯ ಪದಾಧಿಕಾರಿಗಳು ಸಿಂಧನೂರು ತಾಲೂಕಿನ ಮುಖಂಡರು,ಗಣ್ಯರು ಉಪಸ್ಥಿತರಿದ್ದರು. ಕಾರ್ಯಕ್ರಮದಲ್ಲಿ ಜಮಾತೆ ಇಸ್ಲಾಮ್ ಹಿಂದ್ ನ ರಾಜ್ಯ ಕಾರ್ಯದರ್ಶಿಗಳು ಮುಹಮ್ಮದ್ ಯೂಸೂಫ್ ಕನ್ನಿ ಮಾತನಾಡಿ,ಕರ್ನಾಟಕದಲ್ಲಿ ಬಡ್ಡಿರಹಿತವಾಗಿ ನಡೆಸುವ ಇಂತಹ ಸಂಘಗಳು ಕೇವಲ 15 ಮಾತ್ರ ಇವೆ ಮನುಷ್ಯರು ಹಲವಾರು ಸಮಸ್ಯೆಗಳಿಂದ ಬಳಲುತ್ತಿದ್ದಾರೆ. ಬಡ್ಡಿ ಕೊಡುವವನು ಬಡ್ಡಿ ತೆಗೆದುಕೊಳ್ಳುವನು ಬಡ್ಡಿಯ ಲೆಕ್ಕ ಬರೆಯುವನು ಬಡ್ಡಿಯ ಸಾಕ್ಷಿಯ ಮೇಲೂ ಶಾಪವಿದೆ ಎಂದು ಕುರ್ ಆನ್ ಹೇಳುತ್ತದೆ ಆದ್ದರಿಂದ ನೀವುಗಳು ಇಂತಹ ಬಡ್ಡಿಯಿಂದ ದೂರವಿದ್ದು ಇಂತಹ ಸಂಘಗಳಿಗೆ ಪ್ರೋತ್ಸಾಹಿಸಬೇಕು ಎಂದು ಮಾತನಾಡಿದರು ಹಾಗೂ ಎಂಎಲ್ಸಿ ಬಸನಗೌಡ ಬಾದರ್ಲಿ ಮಾತನಾಡಿ ಸಿಂಧನೂರಿನಲ್ಲಿ ಜಮಾತೆ ಇಸ್ಲಾಮಿ ಹಿಂದ್ ನಾನು ನೋಡಿದ ಪ್ರಕಾರ ಹಲವಾರು ವರ್ಷಗಳಿಂದ ತಮ್ಮ ಸಾಮಾಜಿಕ ಸೇವೆಯನ್ನು ಮಾಡುತ್ತಾ ಬಂದಿದೆ, ಕೋವಿಡ್ ಸಮಯದಲ್ಲಂತೂ ಸಾರ್ವಜನಿಕರಿಗೆ ಸಹಾಯ ವಾಗುವಂತೆ ಎಲ್ಲಾ ರೀತಿಯ ಸಮಾಜ ಕಾರ್ಯಗಳನ್ನು ಮಾಡಿದೆ ಹಾಗೆ ಈ ವರ್ಷ ಅನುಗ್ರಹ ಎಂಬ ಬಡ್ಡಿ ರಹಿತ ಸಹಕಾರಿ ಸಂಘವನ್ನು ಸ್ಥಾಪಿಸಿ ತಾಲೂಕಿನ ಬಡವರಿಗೆ ದೀನ ದಲಿತರಿಗೆ ವ್ಯಾಪಾರಸ್ಥರಿಗೆ ಸಣ್ಣ ಉದ್ಯಮದಾರರಿಗೆ ಈ ಒಂದು ಸಹಕಾರಿ ಸಂಘ ಬಹಳ ಉಪಯುಕ್ತವಾಗಲಿದೆ ಈ ಸಹಕಾರಿ ಸಂಘ ಸಿಂಧನೂರಿನ ಇತಿಹಾಸದಲ್ಲಿ ಸುವರ್ಣ ಅಕ್ಷರದಲ್ಲಿ ಯಾರು ಅಳಿಸಲಾಗದಂತೆ ಸೃಷ್ಟಿಯಾಗಿದೆ. ಬಡ್ಡಿ ರಹಿತ, ಆಡಳಿತ ಉತ್ತಮ ಹೆಜ್ಜೆ ಇಟ್ಟಿದೆ ಎಂದರು ಹಾಗೂ ಮಾಜಿ ಸಚಿವ ವೆಂಕಟರಾವ್ ನಾಡಗೌಡ ಅವರು ಮಾತನಾಡಿ ಸುಮಾರು 40 ವರ್ಷದಿಂದ ನಾನು ಸಿಂಧನೂರಿನಲ್ಲಿ ಸಹಕಾರಿ ಸಂಘಗಳನ್ನು ನೋಡುತ್ತಿದ್ದೇನೆ ಬಡ್ಡಿ ರಹಿತ ಸಹಕಾರಿ ಸಂಘ ಇದೇ ಮೊದಲ ಬಾರಿಗೆ ನಾನು ಜಮಾತೆ ಇಸ್ಲಾಮಿ ಹಿಂದ ಅವರ ಅನುಪಸ್ಥಿತಿಯಲ್ಲಿ ಕಾಣುತ್ತಿದ್ದೇನೆ.ಬಡ್ಡಿ, ಚಕ್ರ ಬಡ್ಡಿ,ಮೀಟರ್ ಬಡ್ಡಿ ವ್ಯವಹಾರ ದೇವರು ಮೆಚ್ಚುವುದಿಲ್ಲ. ಅನುಗ್ರಹ ಸಹಕಾರಿ ಸಂಘ ನಮ್ಮ ಸಂಸ್ಥೆ ಇದನ್ನು ನಾವು ನೀವೆಲ್ಲರೂ ಸೇರಿ ಬೆಳೆಸಬೇಕೂ ಎಂದು ಹೇಳಿದರು. ಈ ಕಾರ್ಯಕ್ರಮದಲ್ಲಿ ರಾಜಹುಸೇನ್ ಕಿರಾಅತ್ ಪಠಿಸಿದರು.ಯಾಖೂಬ ಅಲಿ ಸ್ವಾಗತಿಸಿದರು.ಡಾ ಬಸವರಾಜ ನಾಯಕ್ ನಿರೂಪಿಸಿದರು.



**ಅನುಗ್ರಹ ಸಹಕಾರಿ ಸಂಘ ಸಿಂಧನೂರಿನ ಉದ್ಘಾಟನೆಯನ್ನು ಜಮಾತೆ ಇಸ್ಲಾಮಿ ಹಿಂದ್ ರಾಜ್ಯ ಕಾರ್ಯದರ್ಶಿಗಳು ಮಹಮ್ಮದ್ ಯೂಸುಫ್ ಕನ್ನಿ ಅವರು ರಿಬ್ಬನ್ ಕತ್ತರಿಸುವ ಮೂಲಕ ಉದ್ಘಾಟಿಸಿದರು ಮಾಜಿ ಸಚಿವ ವೆಂಕಟರಾವ್ ನಾಡಗೌಡ,ಪಂಪನಗೌಡ ಬಾದರ್ಲಿ,ಕಾಂಗ್ರೆಸ್ ಮುಖಂಡ ಸೈಯದ್ ಹಾರೂನ್ ಸಾಹೇಬ್ ಜಾಗೀರ್ದಾರ ಹಾಗೂ ಸಿಂಧನೂರಿನ ಎಲ್ಲಾ ಗಣ್ಯರು ಉಪಸ್ಥಿತರಿದ್ದರು**

## ಸಾಹಿತ್ಯ ಸಿಂಚನ

ನಮೋ ಚಳಿರಾಯ..!

ಅಬ್ಬಬ್ಬಾ.. ಏನಯ್ಯಾ ನಿನ್ನಯ
ಮಹಿಮೆ ಓ ಚಳಿರಾಯ.!
ಅದೆಂತಹ ಪವಾಡ ವಿಸ್ಮಯ
ಮಾಡಿರುವೆಯಪ್ಪಾ ಮಹರಾಯ.!
ಚಡ್ಡಿ, ಬರ್ಮುಡಾ, ನಿಕ್ಕರು
ಸೇರಿದೆ ಬೆಚ್ಚಗೆ ಅಲಮಾರು.!
ಅರ್ಧಗಿರ್ದ, ಮುಕ್ಕಾಲುಪ್ಯಾಂಟು
ಕಣ್ಣಿಗೇ ಕಾಣದೆ ಆಬ್ಸೆಂಟು.!

ಸ್ಲೀವುಲೆಸ್ಸು, ಡೀಪುನೆಕ್ಕು, ಲೋನೆಕ್ಕು
ಮಿಡೀ, ಮಿನಿ, ತೆಳು ತೆಳುಬಟ್ಟೆ
ಎಲ್ಲವೂ ಕಾಣದಂತೆ ನಾಪತ್ತೆ.!
ಎಲ್ಲರ ಮೇಲೂ ಮೈತುಂಬಾ ಬಟ್ಟೆ.!
ನಿನ್ನಯ ಚಳಿಯ ಆರ್ಭಟಕೆ
ಎಲ್ಲೆಡೆ ಅಘೋಷಿತ ವಸ್ತ್ರಸಂಹಿತೆ.!
ನಾಡಿನ ಉದ್ದಗಲ ದೃಶ್ಯ ಕಂಡು
ನಾಚಿಹಳು ನೆಲದ ಸಂಸ್ಕೃತಿಮಾತೆ.!

ಲೇಟುನೈಟು, ಹೋಲುನೈಟು ಪಾರ್ಟಿ
ಪಬ್ಬು, ಬಾರು, ಎಲ್ಲವೂ ಖಾಲಿ.!
ತೂರಾಡಿ ಹೊಡೆವವರಿಲ್ಲದೆ ಜೋಲಿ
ರಾತ್ರಿ ರಸ್ತೆ ಬೀದಿಗಳೆಲ್ಲ ಖಾಲಿಖಾಲಿ.!
ಗಡಗಡ ಚಳಿಗೆ ಕಿರುಚಾಡಲೂ
ಬರುತಿಲ್ಲ ಗಂಡನ ಬಾಯಿನಾಲಿಗೆ.!
ಕಟಕಟ ಥಂಡಿಗೆ ಗಂಟಲು ಕಟ್ಟಿ
ಜಗಳವಾಡಲೂ ಆಗುತಿಲ್ಲ ಹೆಂಡತಿಗೆ.!

ಚಳಿರಾಯ ನಿನ್ನಿಂದ ಹಾದಿಬೀದಿಯಲಿ
ಇರುಳು ಕುಡಿತ ಬಡಿತ ಬೈಯ್ದಾಟಗಳಿಲ್ಲ.!
ಥಂಡಿರಾಯ ನಿನ್ನಿಂದ ಮನೆಮನೆಯಲಿ
ರಾತ್ರಿ ಜಗಳ ಕಲಹ ರಂಪಾಟಗಳಿಲ್ಲ.!

ನಮೋ ನಮೋ ನಿನಗೆ ಚಳಿರಾಯ.!
ಜಯ ಜಯ ನಿನಗೆ ಥಂಡಿರಾಯ.!

–ಎ.ಎನ್.ರಮೇಶ್.ಗುಬ್ಬಿ

# ಸೊಳ್ಳೆಯ ಕಚ್ಚುವಿಕೆಯಿಂದ ಹರಡುವ ಆನೆಕಾಲು ರೋಗವನ್ನು ಆರಂಭದಲ್ಲಿಯೇ ಗುರ್ತಿಸಲು ರಾತ್ರಿ ವೇಳೆ ರಕ್ತಲೇಪನ:ಡಾ ಚಂದ್ರಶೇಖರಯ್ಯ ಸ್ವಾಮಿ

❑ ನೈಜ್ಯ ದೆಸೆ ನ್ಯೂಸ್





ಸಮುದಾಯದಲ್ಲಿ ನಮ್ಮೊಂದಿಗೆ ಹಲವು ವಿಧದ ಸೊಳ್ಳೆಗಳು ಇದ್ದು ಅದರಲ್ಲಿ ಕ್ಯೂಲೆಕ್ಸ್ ಸೊಳ್ಳೆ, ಆನೆಕಾಲು ರೋಗ ಹೊಂದಿದ ವ್ಯಕ್ತಿಗೆ ಕಚ್ಚಿ ಅದೆ ಸೊಳ್ಳೆ ಇನ್ನೊಬ್ಬರಿಗೆ ಕಚ್ಚಿದಾಗ ಬರಿಗಣ್ಣಿಗೆ ಕಾಣದ 'ವುಚೆರೇ–ರಿಯಾ ಬ್ಯಾಂಕ್ರೋಫ್ಟಿ' 'ಬ್ರೂಗಿಯಾ ಮಲಾಯಿ' ಎಂಬ ಪರಾವಲಂಬಿ ನೂಲಿನಂತಹ ಹುಳುಗಳನ್ನು ಅವರ ದೇಹಕ್ಕೆ ವರ್ಗಾಯಿಸುತ್ತವೆ. ಈ ಹುಳುಗಳು ರಕ್ತ ಮತ್ತು ದುಗ್ಧರಸನಾಳಗಳಲ್ಲಿ ಬೆಳೆದು, ದ್ರವ ಹರಿಯದಂತೆ ತಡೆಯುತ್ತವೆ, ಇದರಿಂದ ಕೈ ಕಾಲುಗಳು ಆನೆಯ ಕಾಲಿನಂತೆ ದಪ್ಪವಾಗುವ ಮೂಲಕ ಶಾಶ್ವತವಾಗಿ ಆನೆಕಾಲು ರೋಗಕ್ಕೆ ಕಾರಣವಾಗುತ್ತಿದ್ದು, ಜಿಲ್ಲೆಯಲ್ಲಿ ರೋಗ ತಡೆಗಾಗಿ ಹಾಗೂ ಆರಂಭದಲ್ಲಿಯೇ ಗುರ್ತಿಸಲು ಆಯ್ದ ಗ್ರಾಮಗಳಲ್ಲಿ ರಾತ್ರಿ ವೇಳೆ ರಕ್ತ ಲೇಪನ ಕಾರ್ಯ ಕೈಗೊಳ್ಳಲಾಗುತ್ತಿದ್ದು, ಸಾರ್ವಜನಿಕರು ಸಹಕರಿಸಲು ಜಿಲ್ಲಾ ರೋಗವಾಹಕ ಆಶ್ರೀತ ರೋಗಗಳ ನಿಯಂತ್ರಣಾಧಿಕಾರಿ ಡಾ ಚಂದ್ರಶೇಖರಯ್ಯ ಸ್ವಾಮಿ ತಿಳಿಸಿದರು. ಮಾನವಿ ತಾಲೂಕಿನ ಕಲ್ಲೂರು ಪ್ರಾಥ–ಮಿಕ ಆರೋಗ್ಯ ಕೇಂದ್ರದ ನೀರಮಾನವಿ ಗ್ರಾಮದಲ್ಲಿ ರಾತ್ರಿ ವೇಳೆ ರಕ್ತಲೇಪನ ಹಮ್ಮಿಕೊಂಡ ಕಾರ್ಯದ ಕುರಿತು ಮಾತನಾಡುತ್ತಾ, ಈಗಾಗಲೇ ಜಿಲ್ಲೆಯನ್ನು ಆನೆಕಾಲು ರೋಗ ಮುಕ್ತವಾಗಿಸುವ ದಿಶೆಯಲ್ಲಿ ಮಾನವಿ ತಾಲೂಕಿನಲ್ಲಿ ತಾಲುಕಾ ಆರೋಗ್ಯಾಧಿಕಾರಿ ಡಾ ಶರಣ ಬಸವರಾಜ ನೇತೃತ್ವದಲ್ಲಿ ನಿರಂತರ ನಿಗಾ ವಹಿಸಲಾಗುತ್ತಿದ್ದು, ಸಾಮಾನ್ಯವಾಗಿ ಆನೆಕಾಲು ರೋಗ ವ್ಯಕ್ತಿಯಲ್ಲಿ ಕಂಡುಬರಲು ಧೀರ್ಘಾವಧಿ ತೆಗೆದುಕೊಳ್ಳುತ್ತದೆ. ಆರಂಭದಲ್ಲಿ ಜ್ವರ ಮತ್ತು ಚಳಿ, ಚರ್ಮದ ಮೇಲೆ ಸೋಂಕು ಹಾಗೂ ಕಾಲುಗಳು, ತೋಳುಗಳು, ಸ್ತನಗಳು ಅಥವಾ ಜನನಾಂಗದ ಭಾಗಗಳಲ್ಲಿ ಊತ ಕಂಡುಬರುತ್ತದೆ. ಕ್ರಮೇಣ ಚರ್ಮವು ದಪ್ಪವಾಗಿ, ಗಟ್ಟಿಯಾಗಿ, ಗರುಸಾಗಿ ಆನೆ ಚರ್ಮದಂತೆ ಕಾಣಿಸುವುದು. ಇದ–ರಿಂದ ಅತಿಯಾದ ನೋವು ಮತ್ತು ನಡೆಯಲು ಕಷ್ಟವಾಗುವುದು. ಇದನ್ನು ರೋಗ ಲಕ್ಷಣಗಳನುಸಾರ ನಿರ್ವಹಣೆ ಚಿಕಿತ್ಸೆ ಮಾತ್ರ ಸಾಧ್ಯವಿದ್ದು, ಸಂಪೂರ್ಣ ಗುಣಪಡಿಸಲು ಕಷ್ಟಕರ. ಈ ಹಿನ್ನಲೆ ಮನೆಯ ಸುತ್ತಲು ಚರಂಡಿ, ತಿಪ್ಪೆಗಳ ಹತ್ತಿರ ಅನುಪಯುಕ್ತ ನೀರು ನಿಲ್ಲದಂತೆ ಹಾಗೂ ಮನೆ ಹೊಲ, ಗದ್ದೆಗಳಲ್ಲಿ ಕೆಲಸ ಮಾಡುವಾಗ ಸೊಳ್ಳೆಯಿಂದ ಕಚ್ಚಿಸಿಕೊಳ್ಳದಂತೆ ಜಾಗೃತಿ ವಹಿಸಲು ವಿನಂತಿಸಿದರು. ಗ್ರಾಮದಲ್ಲಿ ರಕ್ತಲೇಪನವನ್ನು ಆರೋಗ್ಯ ನಿರೀಕ್ಷಣಾಧಿಕಾರಿ ವಿಶ್ವನಾಥ, ಆಶಾ ಕಾರ್ಯಕರ್ತೆ ರಾಜೇಶ್ವರಿ ಕೈಗೊಂಡರು, ಈ ವೇಳೆ ಗ್ರಾಮಸ್ಥರು ಉಪಸ್ಥಿತರಿದ್ದರು.

# ಭೋವಿ ಸಮಾಜದ ತಾಲೂಕು ಅಧ್ಯಕ್ಷರಾಗಿ ಬಸವರಾಜ್ ಮತ್ತು ಕಾರ್ಯದರ್ಶಿಯಾಗಿ ಮಾರೆಪ್ಪ ಆಯ್ಕೆ



❑ ನೈಜ್ಯ ದೆಸೆ ನ್ಯೂಸ್

**ದೇವದುರ್ಗ:** ತಾಲೂಕಿನ ಪ್ರವಾಸಿ ಮಂದಿರದಲ್ಲಿ ಶನಿವಾರ ಬೋವಿ (ವಡ್ಡರ )ಸಮಾಜದ ನೂತನ ಅಧ್ಯಕ್ಷ, ಉಪಾಧ್ಯಕ್ಷರ ಆಯ್ಕೆ ಮಾಡಲಾಯಿತು. ತಾಲೂಕ ಗೌರವಾಧ್ಯಕ್ಷರಾಗಿ ಶಿವರಾಜ ಗೆಜ್ಜೆಬಾವಿ, ಅಧ್ಯಕ್ಷರಾಗಿ ಬಸವರಾಜ್ ಮಸರಕಲ್, ಉಪಾಧ್ಯಕ್ಷರಾಗಿ ಶಿವಪ್ಪ ಆಲ್ಕೋಡ್, ಕಾರ್ಯದರ್ಶಿಯಾಗಿ ಮಾರೆಪ್ಪ ಕೊತ್ತದೊಡ್ಡಿ, ಸಹ ಕಾರ್ಯದರ್ಶಿಯಾಗಿ ಹನುಮಂತ ಜಾಲಹಳ್ಳಿ, ಖಾಜಾಂಚಿಯಾಗಿ ಅಮರೇಶ ಗಣೇಕಲ್, ಸಂಘಟನೆ ಕಾರ್ಯದರ್ಶಿಯಾಗಿ ಶರಣಪ್ಪ ಗೋಪಳಪುರ ಆಯ್ಕೆ ಹಾಗೂ ಸಂಘಟನಾ ಸಂಚಾಲಕರಾಗಿ ಭೀಮಸೇನ, ಭೀಮಣ್ಣ ಕೊತ್ತದೊಡ್ಡಿ ಹೇಗನೂರು ಮತ್ತು ಕಾರ್ಯಕಾ–ರಿಣಿ ಸದಸ್ಯರಾಗಿ ಹನುಮಂತ ಅನ್ವರ, ಗೋವಿಂದ ಅಮರಪೂರ, ಸಚಿನ್ ಆಲ್ದರ್ತಿ, ಹನ್ಮಂತ್ರಾಯ ವಂದಲಿ ಆಯ್ಕೆಯಾದರು. ಜಿಲ್ಲಾಧ್ಯಕ್ಷರಾದ ನಾರಾಯಣ ಸ್ವಾಮಿ ಅವರ ಆದೇಶದ ಮೇರೆಗೆ ಭೋವಿ ಸಮಾಜದ ನೂತನ ಪದಾಧಿಕಾರಿಗಳ ಆಯ್ಕೆ ಮಾಡಲಾಯಿತು. ಸಮಾಜದ ಅಭಿವೃದ್ಧಿಗೆ ಶ್ರಮಿಸಬೇಕು ಎಂದರು. ಈ ಸಂದರ್ಭದಲ್ಲಿ ಮಾಜಿ ಅಧ್ಯಕ್ಷರಾದ ರೆಡ್ಡಿಪ್ಪ ಗೆಜ್ಜೇಬಾವಿ, ಶಂಕ್ರಪ್ಪ, ಹನುಮಂತ ಕಟ್ಟಿಮನಿ, ಕುಪ್ಪಯ್ಯ ಆಲ್ಕೋಡ್, ನಾಗರಾಜ್ ಜಾಡಲದಿನ್ನಿ, ಭೀಮಣ್ಣ ಕೊತ್ತದೊಡ್ಡಿ, ಬಸವರಾಜ ಗೋಪಾಲಪುರ್, ತುಕಾರಾಮ ಜಿನ್ನಾಪುರ್, ವಿಜಯಕುಮಾರ್ ಮುಂತಾದ ಸಮಾಜದ ಮುಖಂಡರು ಇದ್ದರು.

# ರಾಷ್ಟ್ರೀಯ ಪರೀಕ್ಷಾ ಸಂಸ್ಥೆ (NTA) ವತಿಯಿಂದ ಕೇಂದ್ರ ವಿಶ್ವವಿದ್ಯಾಲಯ ಪ್ರವೇಶ ಪರೀಕ್ಷೆ – ಜ 14 ಕೊನೆಯ

❑ ನೈಜ್ಯ ದೆಸೆ ನ್ಯೂಸ್

ರಾಷ್ಟ್ರೀಯ ಪರೀಕ್ಷಾ ಸಂಸ್ಥೆ (NTA) ವತಿಯಿಂದ ಕೇಂದ್ರ ವಿಶ್ವವಿದ್ಯಾಲಯ ಪ್ರವೇಶ ಪರೀಕ್ಷೆ – ಸ್ನಾತಕೋತ್ತರ (CUET–PG) 2026 ಅನ್ನು ನಡೆಸಲಾಗುತ್ತಿದೆ. ಈ ಪರೀಕ್ಷೆಯ ಮೂಲಕ ದೇಶದಾದ್ಯಂತ ಇರುವ ಕೇಂದ್ರ ವಿಶ್ವವಿದ್ಯಾಲಯಗಳು, ರಾಜ್ಯ ವಿಶ್ವವಿದ್ಯಾಲಯಗಳು, ಡೀಮ್ಡ್ ಹಾಗೂ ಇತರೆ ಪಾಲ್ಗೊಳ್ಳುವ ಉನ್ನತ ಶಿಕ್ಷಣ ಸಂಸ್ಥೆಗಳ ವಿವಿಧ ಸ್ನಾತಕೋತ್ತರ ಕೋರ್ಸ್‌ಗಳಿಗೆ ಪ್ರವೇಶ ನೀಡಲಾಗುತ್ತದೆ. 2026–27 ಶೈಕ್ಷಣಿಕ ವರ್ಷಕ್ಕೆ ಸಂಬಂಧಿಸಿದಂತೆ ಈ ಪರೀಕ್ಷೆ ಕಂಪ್ಯೂಟರ್ ಆಧ–ಾರಿತ ಪರೀಕ್ಷೆ (CBT) ರೂಪದಲ್ಲಿ ನಡೆಯಲಿದೆ. ಆನ್‌ಲೈನ್ ಅರ್ಜಿ ಸಲ್ಲಿಕೆ ಪ್ರಕ್ರಿಯೆ 2025 ಡಿಸೆಂಬರ್ 14ರಿಂದ ಪ್ರಾರಂಭಗೊಂಡಿದ್ದು, 2026 ಜನವರಿ 14ರ ರಾತ್ರಿ 11.50ರವರೆಗೆ ಅವಕಾಶ ಕಲ್ಪಿಸಲಾಗಿದೆ. ಪರೀಕ್ಷಾ ಶುಲ್ಕವನ್ನು ಕ್ರೆಡಿಟ್ ಕಾರ್ಡ್, ಡೆಬಿಟ್ ಕಾರ್ಡ್, ನೆಟ್ ಬ್ಯಾಂಕಿಂಗ್ ಅಥ–ವಾ ಯುಪಿಐ ಮೂಲಕ ಪಾವತಿಸಲು ಜನವರಿ 14 ಕೊನೆಯ ದಿನವಾಗಿದೆ. ಅರ್ಜಿಯಲ್ಲಿ ತಪ್ಪುಗಳಿದ್ದಲ್ಲಿ ಅವುಗಳನ್ನು ಸರಿಪಡಿಸಲು 2026 ಜನವರಿ 18ರಿಂದ 20ರವರೆಗೆ ತಿದ್ದುಪಡಿ ಅವಕಾಶ ನೀಡಲಾಗಿದೆ. ಪರೀಕ್ಷೆಯು 2026 ಮಾರ್ಚ್ ತಿಂಗಳಲ್ಲಿ ನಡೆಯಲಿದ್ದು, ಪರೀಕ್ಷಾ ಕೇಂದ್ರ, ದಿನಾಂಕ ಮತ್ತು ಶಿಫ್ಟ್ ವಿವರಗಳನ್ನು ಪ್ರವೇಶ ಪತ್ರದಲ್ಲಿ ತಿಳಿಸಲಾಗುತ್ತದೆ. ಪ್ರವೇಶ ಪತ್ರ ಮತ್ತು ಪರೀಕ್ಷಾ ನಗರ ಮಾಹಿತಿಯನ್ನು ನಂತರ ಪ್ರಕಟಿಸಲಾಗುತ್ತದೆ. ಕಲಾ, ವಾಣಿಜ್ಯ, ವಿಜ್ಞಾನ, ಶಿಕ್ಷಣ, ಭಾಷೆಗಳು, ಎಂಜಿನಿಯರಿಂಗ್ ಹಾಗೂ ಇತರೆ ಹಲವಾರು ಸ್ನಾತಕೋತ್ತರ ಕೋರ್ಸ್‌ಗಳಿಗೆ CUET–PG ಮೂಲಕ ಪ್ರವೇಶ ಲಭ್ಯವಿರುತ್ತದೆ. ಅಭ್ಯರ್ಥಿಗಳು ನಿಯಮಿತವಾಗಿ NTA ಅಧಿಕೃತ ವೆಬ್‌ಸೈಟ್‌ಗಳನ್ನು ಪರಿಶೀಲಿಸುವಂತೆ ಸೂಚಿಸಲಾಗಿದೆ.

# ರಾಷ್ಟ್ರೀಯ ಲೋಕ ಅದಾಲತ್ : ಮತ್ತೆ ಒಂದಾದ 10 ಜೋಡಿಗಳು

❑ ನೈಜ್ಯ ದೆಸೆ ನ್ಯೂಸ್



ಕೊಪ್ಪಳ, ಡಿ.13: ರಾಷ್ಟ್ರೀಯ ಲೋಕ ಅದಾಲತ್‌ನಲ್ಲಿ ಮನಸ್ತಾಪ ಮರೆತು ಜಿಲ್ಲೆಯ 10 ಜೋಡಿಗಳು ಮತ್ತೆ ಒಂದಾಗಿದ್ದಾರೆ. ಜಿಲ್ಲೆಯ ಎಲ್ಲ ತಾಲೂಕು ನ್ಯಾಯಾಲಯಗಳಲ್ಲಿ ನಡೆದ ರಾಷ್ಟ್ರೀಯ ಲೋಕ ಅದಾಲತ್‌ನಲ್ಲಿ 87,918 ಪ್ರಕರಣಗಳ ಪೈಕಿ 79,355 ಪ್ರಕರಣಗಳನ್ನು ಇತ್ಯರ್ಥಪಡಿಸಲಾಗಿದ್ದು, ವಿಚ್ಛೇದನಕ್ಕೆ ಅರ್ಜಿಸಲ್ಲಿಸಿ 10 ವರ್ಷ ದೂರವಿದ್ದ ಒಂದು ಜೋಡಿಯನ್ನು ಸಹ ಒಂದು ಮಾಡಲಾಗಿದೆ. ಕೊಪ್ಪಳ, ಗಂಗಾವತಿ, ಕುಷ್ಟಗಿ ಹಾಗೂ ಯಲಬುರ್ಗಾ ನ್ಯಾಯಾಲಯಗಳಲ್ಲಿನ ವಿಮೆ, ನೀರಿನ ಬಿಲ್, ಬ್ಯಾಂಕ್ ಸಾಲ, ಮನೆ ಕರ, ಕೌಟುಂಬಿಕ ದೌರ್ಜನ್ಯ, ಜೀವನಾಂಶ, ಚೆಕ್ ಬೌನ್ಸ್ ಪ್ರಕರಣಗಳು, ಜನನ ಮರಣ, ಸಿವಿಲ್ ಕೇಸ್, ಕ್ರಿಮಿನಲ್ ಕೇಸ್, ಮೋಟಾರ್ ವಾಹನ ಅಪಘಾತ, ಎಂಎಂಆರ್ಡಿ ಪ್ರಕರಣಗಳು ಸೇರಿದಂತೆ 6,764 ಪ್ರಕರಣಗಳು ಇತ್ಯರ್ಥ ಪಡಿಸಲಾಗಿದೆ. ದಾಖಲೆಯ ಮೌಲ್ಯ :ವಿಮೆ, ನೀರಿನ ಕರ, ಮೋಟಾರ್ ವಾಹನ ಅಪಘಾತ ಪ್ರಕರಣಗಳು ಮತ್ತು ಪೂರ್ವ ದಾವೆ ಪ್ರಕರಣಗಳಿಗೆ ಸಂಬಂಧಿಸಿದಂತೆ ಒಟ್ಟು 135,261,312 ಕೋಟಿ ಮೌಲ್ಯ 79,305 ಪ್ರಕರಣಗಳ ಪೈಕಿ 72,591 ಪ್ರಕರಣಗಳನ್ನು ಇತ್ಯರ್ಥಪಡಿಸಲಾಗಿದೆ.939,878,456 ಕೋಟಿ ಮೌಲ್ಯದ 87,918 ಪ್ರಕರಣಗಳ ಪೈಕಿ 79,355 ಪ್ರಕರಣಗಳನ್ನು ಇತ್ಯರ್ಥಪಡಿಸಲಾಗಿದ್ದು, ಈ ಬಾರಿ ದಾಖಲೆ ಪ್ರಮಾಣದಲ್ಲಿ ಪ್ರಕರಣಗಳನ್ನು ರಾಜಿ ಮೂಲಕ ಇತ್ಯಾರ್ಥ ಪಡಿಸಲಾಗಿದೆ ಎಂದು ಕೊಪ್ಪಳ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ ಪ್ರಕಟಣೆಯಲ್ಲಿ ತಿಳಿಸಿದೆ.

❑ ನೈಜ್ಯ ದೆಸೆ ನ್ಯೂಸ್



ಮಾನ್ವಿ: ಸರಳ ಸಜ್ಜನ, ಸ್ನೇಹಜೀವಿ, ಅಜಾತಶತ್ರು,ಮಾಜಿ ಪುರಸಭೆ ಸದಸ್ಯರು ಮಿರ್ಜಾ ಶಕೀಲ್ ಬೇಗ್ (56) ಇವರು ರವಿವಾರ ರಾತ್ರಿ 10–00 ಗಂಟೆಗೆ ತೀವ್ರ ಹೃದಯಘಾತದಿಂದ ವಿಧಿವಶರಾಗಿದ್ದಾರೆ .ಸೋಮವಾರ ಅಂತ್ಯಕ್ರಿಯೆ ಮಾನ್ವಿಯಲ್ಲಿ ನಡೆಯಲಿದೆ. ಅವರ ಆತ್ಮಕ್ಕೆ ಪರಮ ದಯಮಾಯಿ, ಕರುಣಾಮಯಿ ಅದ ಸೃಷ್ಟಿಕರ್ತ ಮಘ್ಫಿರತ್ ನೀಡಲಿ ಹಾಗೂ ಅವರ ಕುಟುಂಬಕ್ಕೆ ಹಾಗೂ ಅಭಿಮಾನಿ ಬಳಗಕ್ಕೆ ದುಃಖ ಭರಿಸುವ ಶಕ್ತಿ ನೀಡಲಿ ಎಂದು ಪ್ರಾರ್ಥಿಸುತ್ತೇವೆ.ಇನ್ನಾ ಲಿಲ್ಲಾಹಿ ವ ಇನ್ನಾ ಇಲೈಹಿ ರಾಜಿಊನ್.

# ಉಚಿತ ಕಣ್ಣಿನ ತಪಾಸಣೆ ಹಾಗೂ ಶಸ್ತ್ರ ಚಿಕಿತ್ಸಾ,ಶಿಬಿರ



❑ ನೈಜ್ಯ ದೆಸೆ ನ್ಯೂಸ್

ವಿಜಯಪುರ : ಡಿ 14 : ನಗರದ ಅನುಗ್ರಹ ಕಣ್ಣಿನ ಆಸ್ಪತ್ರೆ, ಅನುಗ್ರಹ ವಿಷನ್ ಫೌಂಡೇಶನ್, ಟ್ರಸ್ಟ್ ಮತ್ತು ಜಿಲ್ಲಾ ಅಂದತ್ವ ನಿವಾರಣ ಸಂಸ್ಥೆ, ವೇದೋದ್ದೇಶ ಪ್ರಾಥಮಿಕ ಗ್ರಾಮೀಣ ಕೃಷಿ ಸಹಕಾರ ಸಂಘ , ನಿಜಮನಾಳ ಹಾಗೂ ಜುಮನಾಳ ಗ್ರಾಮದ ಸಮಸ್ತ ಗುರು ಹಿರಿಯರ ಸಹಯೋಗದಲ್ಲಿ ಉಚಿತ ಕಣ್ಣಿನ ತಪಾಸಣೆ ಹಾಗೂ ಶಸ್ತ್ರಚಿಕಿತ್ಸೆ ಶಿಬಿರವನ್ನು ಡಿ 16 ರಂದು ಮಂಗಳವಾರ ಜುಮನಾಳದ ಶ್ರೀ ಜಟ್ಟಿಂಗೇಶ್ವರ ದೇವಸ್ಥಾನದಲ್ಲಿ ಹಮ್ಮಿಕೊಳ್ಳಲಾಗಿದೆ. ಈ ಸಂದರ್ಭದಲ್ಲಿ ವಿವಿದೋದ್ದೇಶ ಪ್ರಾಥ–ಮಿಕ ಗ್ರಾಮೀಣ ಕೃಷಿ ಸಹಕಾರಿ ಸಂಘ, ನಿ ವಿಜಯಪುರ ಜುಮನಾಳ ಅಧ್ಯಕ್ಷ ರಮೇಶ್ ವಗ್ಗರ , ಉಪಾಧ್ಯಕ್ಷ ಆನಂದ್ ಹೊನ್ನುಟಗಿ , ಮುಖ್ಯ ಕಾರ್ಯ ನಿರ್ವಹಣಾಧಿಕಾರಿ ಬಿ ಎನ್ ಪೂಜಾರಿ ಭಾಗವಹಿಸಲಿದ್ದಾರೆ , ಸಾರ್ವಜನಿಕರು ಈ ಶಿಬಿರದ ಸದುಪಯೋಗಪಡಿಸಿಕೊಳ್ಳಬೇಕೆಂದು ಪ್ರಕಟಣೆಯಲ್ಲಿ ಸಂಘದ ಆಡಳಿತ ಮಂಡಳಿ ತಿಳಿಸಿದೆ

# ಅಖಿಲ ಭಾರತ ದಲಿತ ಸಾಹಿತ್ಯ ಸಮ್ಮೇಳನ ಡಿ.20ರಿಂದ

❑ ನೈಜ್ಯ ದೆಸೆ ನ್ಯೂಸ್

ರಾಯಚೂರು: ದಲಿತ ಸಾಹಿತ್ಯ ಪರಿಷತ್ತಿನ ರಾಜ್ಯ ಘಟಕದ ವತಿಯಿಂದ 11ನೇ ಅಖಿಲ ಭಾರತ ದಲಿತ ಸಾಹಿತ್ಯ ಸಮ್ಮೇಳನ ಡಿ.20 ಹಾಗೂ 21ರಂದು ನಗರದ ಪಂಡಿತ ಸಿದ್ಧರಾಮ ಜಂಬಲದಿನ್ನಿ ರಂಗ ಮಂದಿರದಲ್ಲಿ ಏರ್ಪಡಿಸಲಾಗಿದೆ ಎಂದು ಪರಿಷತ್ತಿನ ರಾಜ್ಯ ಘಟಕದ ಅಧ್ಯಕ್ಷ ಅರ್ಜುನ ಗೋಳಸಂಗಿ ಹೇಳಿದರು. ಸಾಹಿತಿ ಜಯದೇವಿ ಗಾಯಕವಾಡ ಸಮ್ಮೇಳನದ ಸರ್ವಾಧ್ಯಕ್ಷತೆ ವಹಿಸಲಿದ್ದಾರೆ. ಸಾಹಿತಿ ಪ್ರೊ. ಬರಗೂರು ರಾಮಚಂದ್ರಪ್ಪ ಉದ್ಘಾಟಿಸಲಿದ್ದಾರೆ ಎಂದು ನಗರದಲ್ಲಿ ಭಾನುವಾರ ಮಾಧ್ಯಮ ಗೋಷ್ಠಿಯಲ್ಲಿ ತಿಳಿಸಿದರು. ಸಮ್ಮೇಳನದಲ್ಲಿ 'ಸರ್ವ–ರಿಗೂ ಸಂವಿಧಾನ' ಮತ್ತು 'ಮೀಸಲಾತಿ ಒಳಗೆ ಮತ್ತು ಹೊರಗೆ' ಕುರಿತು ಎರಡು ಸಂವಾದ ಗೋಷ್ಠಿಯನ್ನು ಆಯೋಜಿಸಲಾಗಿದೆ. ಸಂವಿಧಾನ ಕುರಿತು ಕೇಂದ್ರೀಯ ವಿಶ್ವವಿದ್ಯಾಲಯದ ಕನ್ನಡ ಪ್ರಾಧ್ಯಾಪಕ ಡಾ.ಅಪ್ಪಗೆರೆ ಸೋಮಶೇಖರ ಹಾಗೂ 'ಮೀಸಲಾತಿ ಒಳಗೆ ಮತ್ತು ಹೊರಗೆ' ಕುರಿತು ಸಾಹಿತಿ ಗುರುಪ್ರಸಾದ ಕಂಟಲಗೆರೆ ವಿಷಯ ಮಂಡಿಸಲಿದ್ದಾರೆ ಎಂದು ಹೇಳಿದರು ಸಮ್ಮೇಳನಾಧ್ಯಕ್ಷರ ಸಾಹಿತ್ಯದ ಕುರಿತು ವಿಚಾರ ಗೋಷ್ಠಿ, ಮಹಿಳಾ ಕಾವ್ಯಾಯಾನ, ಪುರುಷ ಕಾವ್ಯಾಯಾನ, ಸಾಂಸ್ಕೃತಿಕ ಕಾರ್ಯಕ್ರಮಗಳು, ರಾಷ್ಟ್ರೀಯ ಗೌರವ ಪ್ರಶಸ್ತಿ, ರಾಷ್ಟ್ರೀಯ ಯುವ ಪ್ರಶಸ್ತಿ, ರಾಷ್ಟ್ರೀಯ ಪುಸ್ತಕ ಪ್ರಶಸ್ತಿ, ಬಾಲ ಪ್ರಶಸ್ತಿ ಪ್ರದಾನ ಕಾರ್ಯಕ್ರಮಗಳು ನಡೆಯಲಿವೆ ಎಂದರು.ಸಣ್ಣ ನೀರಾವರಿ ಸಚಿವ ಎನ್.ಎಸ್.ಬೋಸರಾಜು ಪ್ರಾಸ್ತಾವಿಕವಾಗಿ ಮಾತನಾಡಲಿದ್ದಾರೆ. ಡಾ.ಎಲ್. ಹನುಮಂತಪ್ಪ ಆಶಯ ಭಾಷಣ ಮಾಡಲಿದ್ದಾರೆ. ಕಸಾಪ ನಿಕಟಪೂರ್ವ ಅಧ್ಯಕ್ಷ ಮನುಬಳಿಗಾರ, ಪ್ರೊ. ಎಚ್.ಟಿ.ಪೋತೆ, ಜಿಲ್ಲೆಯ ಶಾಸಕರು, ವಿಧಾನ ಪರಿಷತ್ ಸದಸ್ಯರು, ಸಂಸದರು, ಅಧಿಕಾರಿಗಳು ಸಾಹಿತಿಗಳು, ಭಾಗವಹಿಸಲಿದ್ದಾರೆ ಎಂದು ತಿಳಿಸಿದರು.ಡಿ.20ರಂದು ಬೆಳಿಗ್ಗೆ 8 ಗಂಟೆಗೆ ಬಸವೇಶ್ವರ ವೃತ್ತದಿಂದ ಜಿಲ್ಲಾ ರಂಗ ಮಂದಿರದ ವರೆಗೆ ಜಾನಪದ ಕಲಾ ತಂಡಗಳ ಮೆರವಣಿಗೆ ನಡೆಯಲಿದೆ. ಮೇಯರ್ ನರಸಮ್ಮ ಮಾಡಗಿರಿ ಮೆರವಣಿಗೆ ಚಾಲನೆ ನೀಡುವರು. ಬೆಳಿಗ್ಗೆ 10.30ಕ್ಕೆ ರಂಗ ಮಂದಿರದಲ್ಲಿ ವೇದಿಕೆ ಕಾರ್ಯಕ್ರಮ ಆರಂಭವಾಗಿದೆ ಎಂದು ಹೇಳಿದರು. ಸಮ್ಮೇಳನದಲ್ಲಿ ಒಟ್ಟು ಆರು ಗೋಷ್ಠಿಗಳು ನಡೆಯಲಿವೆ. ಡಿ.21 ರಂದು ಸಂಜೆ 4 ಗಂಟೆಗೆ ಸಮಾರೋಪ ಕಾರ್ಯಕ್ರಮ ನಡೆಯಲಿದೆ. ಜಾನಪದ ಅಕಾಡೆಮಿ ಅಧ್ಯಕ್ಷ ಗೊಲ್ಲಹಳ್ಳಿ ಶಿವಪ್ರಸಾದ ಸಮಾರೋಪ ಭಾಷಣ ಮಾಡುವರು. ಬೀದರ್‌ನ ಬೌದ್ಧ ವಿಹಾರದ ವರಜ್ಯೋತಿ ಭಂತೇಜಿ ನೇತೃತ್ವ ವಹಿಸುವರು ಎಂದು ತಿಳಿಸಿದರು ತಾಯರಾಜ್ ಮರ್ಚಟಾಳ, ಹುಸೇನಪ್ಪ ಅಮರಾಪೂರ, ಶರಣಪ್ಪ ಚಲವಾದಿ, ಪಾರ್ಥ ಸಿರವಾರ, ಧರ್ಮಾವತಿ ಎಸ್.ನಾಯಕ, ನರಸಿಂಹಲು, ರಾಮಣ್ಣ ಹಿರೆಭೇರಿಗಿ ಉಪಸ್ಥಿತರಿದ್ದರು.

# ಶ್ರೀ ವಾಸವಿ ವಿದ್ಯಾರ್ಥಿಗಳ ಸಾಧನೆ – ಪ್ರತಿಭಾ ಕಾರಂಜಿ

❑ ನೈಜ್ಯ ದೆಸೆ ನ್ಯೂಸ್

**ಬಳ್ಳಾರಿ : ನಮ್ಮ ಶಾಲೆಯ ವಿದ್ಯಾರ್ಥಿಗಳು ಸ್ಪರ್ಧೆಗಳಲ್ಲಿ ತೋರಿದ ಆತ್ಮವಿಶ್ವಾಸ ಹಾಗೂ ಸೃಜನಶೀಲತೆ ಎಲ್ಲರ ಮೆಚ್ಚುಗೆಗೆ ಪಾತ್ರವಾಗಿದೆ ಎಂದು ಶ್ರೀ ವಾಸವಿ ಎಜ್ಯುಕೇಷನ್ ಟ್ರಸ್ಟ್ ನ ಕಾರ್ಯದರ್ಶಿಗಳಾದ ಪಿ.ಎನ್.ಸುರೇಶ್ ಅವರು ತಿಳಿಸಿದ್ದಾರೆ**

ಇಂದಿರಾನಗರ ಕ್ಲಸ್ಟರ್ ಮಟ್ಟದಲ್ಲಿ ನಡೆದ ಪ್ರತಿಭಾ ಕಾರಂಜಿ 2025–26 ರಲ್ಲಿ ಶ್ರೀ ವಾಸವಿ ವಿದ್ಯಾಲಯದ ವಿದ್ಯಾರ್ಥಿಗಳು ಸಾಂಸ್ಕೃತಿಕ, ಸಾಹಿತ್ಯ, ಕಲಾ, ಪ್ರಬಂಧ, ಸಂಸ್ಕೃತ ಮತ್ತು ಅರಬೀಕ್ ಧಾರ್ಮಿಕ ಪಠಣ, ಚಿತ್ರಕಲೆ, ಕಂಠಪಾಠ, ಆಶುಭಾಷಣ, ಕ್ಲೆ ಮಾಡಲ್, ರಂಗೋಲಿ, ಭರತನಾಟ್ಯ, ಕವ್ವಾಲಿ ಮತ್ತು ಹಲವು ವಿಭಾಗಗಳಲ್ಲಿ ವಿದ್ಯಾರ್ಥಿಗಳು 30 ಪ್ರಶಸ್ತಿಗಳನ್ನು ಪಡೆಯುವ ಮೂಲಕ ಉತ್ತಮ ಸಾಧನೆ ಮಾಡಿರುವುದನ್ನು ಶ್ಲಾಘಿಸಿ ಅವರು ಮಾತನಾಡಿದರು. ವಿದ್ಯಾರ್ಥಿಗಳ ಈ ಸಾಧನೆ ನಮ್ಮ ಸಂಸ್ಥೆಯ ಮೌಲ್ಯಗಳು ಮತ್ತು ವಿದ್ಯಾರ್ಥಿ ಕೇಂದ್ರಿತ ಶಿಕ್ಷಣದ ಫಲವಾಗಿದೆ. ಅಲ್ಲದೇ, ನಮ್ಮ ಸಂಸ್ಥೆಯಲ್ಲಿ ಕೇವಲ ಶಿಕ್ಷಣವನ್ನು ಬೋಧಿಸುವುದಿಲ್ಲ, ಬದಲಾಗಿ ವ್ಯಕ್ತಿತ್ವ ರೂಪುಗೊಳ್ಳುವಲ್ಲಿ ಅಗತ್ಯವಿರುವ ವಿವಿಧ ಕ್ಷೇತ್ರಗಳಲ್ಲಿ ವಿದ್ಯಾರ್ಥಿಗಳು ಪಾಲ್ಗೊಳ್ಳುವಂತೆ ಪ್ರೋತ್ಸಾಹಿಸಲಾಗತ್ತದೆ ಎನ್ನುವುದು ಸಾಬೀತಾಗುತ್ತದೆ ಎಂದರು. ಶಾಲಾ ಮುಖ್ಯಗುರುಗಳಾದ ವೀರೇಶ್. ಯು ಅವರು, ವಿದ್ಯಾರ್ಥಿಗಳ ಪ್ರಸ್ತುತ ಸ್ಪರ್ಧಾತ್ಮಕ ಚಟುವಟಿ–ಕೆಗಳಲ್ಲಿ ಪಾಲ್ಗೊಳ್ಳುವಿಕೆ ಮತ್ತು ಸಾಧನೆಯು ಅವರ ಭವಿಷ್ಯವನ್ನು ರೂಪಿಸುವಲ್ಲಿ ಪ್ರೋತ್ಸಾಹಿಸುತ್ತದೆ ಎಂದರು.

## ನೇಮಕಾತಿ ಪ್ರಕಟಣೆ

ರಾಯಚೂರು ಜಿಲ್ಲಾ ಪಂಚಾಯತ್ ನೇಮಕಾತಿ 2025 – 09 ತಾಂತ್ರಿಕ ಸಂಯೋಜಕರು, ಕಂಪ್ಯೂಟರ್ ನಿರ್ವಾಹಕ ಹುದ್ದೆಗಳಿಗೆ ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಿ ರಾಯಚೂರು ಜಿಲ್ಲಾ ಪಂಚಾಯತ್ ನೇಮಕಾತಿ 2025: 09 ತಾಂತ್ರಿಕ ಸಂಯೋಜಕರು, ಕಂಪ್ಯೂಟರ್ ನಿರ್ವಾಹಕ ಹುದ್ದೆಗಳಿಗೆ ಅರ್ಜಿ ಸಲ್ಲಿಸಿ. ರಾಯಚೂರು ಜಿಲ್ಲಾ ಪಂಚಾಯತ್ ಡಿಸೆಂಬರ್ 2025 ರ ಅಧಿಕೃತ ಅಧಿಸೂಚನೆಯ ಮೂಲಕ ತಾಂತ್ರಿಕ ಸಂಯೋಜಕರು, ಕಂಪ್ಯೂಟರ್ ನಿರ್ವಾಹಕ ಹುದ್ದೆಗಳನ್ನು ಭರ್ತಿ ಮಾಡಲು ಅರ್ಹ ಮತ್ತು ಆಸಕ್ತ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಲಾಗಿದೆ. ರಾಯಚೂರು – ಕರ್ನಾಟಕ ಸರ್ಕಾರದಲ್ಲಿ ವೃತ್ತಿಜೀವನವನ್ನು ಹುಡುಕುತ್ತಿರುವ ಉದ್ಯೋಗಾಕಾಂಕ್ಷಿಗಳು ಈ ಅವಕಾಶವನ್ನು ಬಳಸಿಕೊಳ್ಳಬಹುದು. ಆಸಕ್ತ ಅಭ್ಯರ್ಥಿಗಳು 24–ಡಿಸೆಂಬರ್–2025 ರಂದು ಅಥವಾ ಮೊದಲು ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಬಹುದು. ರಾಯಚೂರು ಜಿಲ್ಲಾ ಪಂಚಾಯತ್ ಹುದ್ದೆಯ ವಿವರಗಳು ಪೋಸ್ಟ್ ಹೆಸರು ಹುದ್ದೆಗಳ ಸಂಖ್ಯೆ ತಾಂತ್ರಿಕ ಸಂಯೋಜಕರು 2 ತಾಲ್ಲೂಕು MIS ಸಂಯೋಜಕರು 2 ಆಡಳಿತ ಸಹಾಯಕರು 3 ಕಂಪ್ಯೂಟರ್ ಆಡಳಿತಾಧಿಕಾರಿ (DEO) 2 ಅಧಿಕೃತ ವೆಬ್‌ಸೈಟ್: zpraichur.karnataka.gov.in ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಲು ಪ್ರಾರಂಭ ದಿನಾಂಕ: 10–12–2025 ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ:

24–ಡಿಸೆಂಬರ್–2025

# ತಾಲೂಕಿನಲ್ಲಿ ಹೆಚ್ಚಾದ ಗಾಂಜಾ ,ಡ್ರಗ್ಸ್ ,ಅಪಘಾತ ,ಸಲಹೆ ಸೂಚನೆಗಾಗಿ ಸರ್ವರ ಸಭೆ ಕರೆದ ಡಿವೈಎಸ್ಪಿ ಜಿ.ಚಂದ್ರಶೇಖರ್



ನೈಜ್ಯ ದೆಸೆ ನ್ಯೂಸ್

**ಸಿಂಧನೂರು** : ನಗರದ ಸರ್ಕ್ಯೂಟ್ ಹೌಸ್ ನಲ್ಲಿ ಶನಿವಾರ ಸಂಜೆ ಸಿಂಧನೂರು ಪೊಲೀಸ್ ಉಪವಿಭಾಗ ಡಿವೈಎಸ್ಪಿ ಜಿ.ಚಂದ್ರಶೇಖರ್ ಅವರ ಅಧ್ಯಕ್ಷತೆಯಲ್ಲಿ ವಿವಿಧ ಪಕ್ಷಗಳ ಮುಖಂಡರ ಹಾಗೂ ಸಂಘ ಸಂಸ್ಥೆಗಳ ಮುಖಂಡರು ಒಳಗೊಂಡಂತೆ ಬಾರ್ ಮತ್ತು ರೆಸ್ಟೋರೆಂಟ್ ಮಾಲೀಕರು ಸೇರಿದಂತೆ ಅನೇಕರೊಂದಿಗೆ ಸಭೆ ನಡೆಸಲಾಯಿತು. ಪ್ರಮುಖವಾಗಿ ಮಾಜಿ ಸಂಸದ ಕೆ.ವಿರುಪಾಕ್ಷಪ್ಪ, ಮಾಜಿ ಸಚಿವ ವೆಂಕಟರಾವ್ ನಾಡಗೌಡ, ಮಸ್ಕಿ ಶಾಸಕ ಆರ್.ಬಸನಗೌಡ ತುರ್ವಿಹಾಳ, ಆರ್.ಡಿ.ಸಿ.ಸಿ.ಬ್ಯಾಂಕ್ ನಿರ್ದೇಶಕರಾದ ಸೋಮನಗೌಡ ಬಾದರ್ಲಿ, ಕಾಂಗ್ರೆಸ್ ಪಕ್ಷದ ಮುಖಂಡರಾದ ಪಂಪನಗೌಡ ಬಾದರ್ಲಿ, ಈ ಸಭೆಯಲ್ಲಿ ಭಾಗವಹಿಸಿ, ತಾಲೂಕಿನಲ್ಲಿ ಇತ್ತೀಚೆಗೆ ರಸ್ತೆ ಅಪಘಾತಗಳ ಹೆಚ್ಚಾಗುತ್ತಿದ್ದು, ತಡೆಗಟ್ಟಲು ಮತ್ತು ಗಾಂಜಾ, ಅಫೀಮ್, ಡ್ರಗ್ಸ್, ವ್ಯಾಪಕವಾಗಿ ಮಾರಾಟ ಮಾಡುವ ಹಾಗೂ ಸೇವಿಸುವ ಜಾಲಾ ಹರಡುತ್ತಿದೆ. ಅದೇರೀತಿ ರಸ್ತೆ ನಿಯಮಗಳನ್ನು ಪಾಲಿಸದೆ ಹಲವಾರು ಜನರು ಪ್ರಾಣವನ್ನು ಕಳೆದುಕೊಂಡು ಕುಟುಂಬಗಳು ಬೀದಿಗೆ ಬಂದಿವೆ. ಕಾರಣ ರಸ್ತೆ ಅಪಘಾತ ತಡೆಗಟ್ಟಲು ಗಾಂಜಾ, ಮತ್ತು ಡ್ರಗ್ಸ್ ಮಾರಾಟವನ್ನು ತಡೆಗಟ್ಟಲು ಯಾವರೀತಿ ಕ್ರಮವನ್ನು ಕೈಗೊಳ್ಳಬೇಕು ಹಾಗೂ ಇವುಗಳನ್ನು ತಡೆಯಲು ಪೊಲೀಸ್ ಇಲಾಖೆಯಿಂದ ಸಾರ್ವಜನಿಕರು ರಾಜಕೀಯ ಪಕ್ಷದ ಮುಖಂಡರು ಯಾವರೀತಿ ಸಹಕರಿಸಬೇಕು ಎನ್ನುವ ಕುರಿತು ಚರ್ಚಿಸಲಾಯಿತು. ತದನಂತರ ರಾತ್ರಿ 10:45 ರನಂತರ ಸಂಪೂರ್ಣ ಬಾರ್ ಮತ್ತು ರೆಸ್ಟೋರೆಂಟ್ ಸೇರಿದಂತೆ ಇತರೆ ವ್ಯಾಪಾರ ವಹಿವಾಟ ಬಂದ್ ಮಾಡುವುದು, ಅನವಶ್ಯಕವಾಗಿ ಯಾರು ರಸ್ತೆಯಲ್ಲಿ ತಿರುಗಾಡುವುದು ಕಡ್ಡಾಯವಾಗಿ ನಿಲ್ಲಿಸಬೇಕು, ಗಾಂಜಾ, ಡ್ರಗ್ಸ್, ಮಾರಾಟ ಮಾಡುವ ಸೇವಿಸುವ ಮತ್ತು ರಸ್ತೆ ನಿಯಮಗಳನ್ನು ಉಲ್ಲಂಘಿಸಿ ವಾಹನ ಚಲಾಯಿಸುವವರ ಪರವಾಗಿ ಯಾವುದೇ ಪಕ್ಷದ ಮುಖಂಡರು ಹಾಗೂ ಸಂಘ ಸಂಸ್ಥೆಗಳ ಮುಖಂಡರು, ಪೊಲೀಸ್ ಇಲಾಖೆಗೆ ಒತ್ತಡ ಹಾಕದೆ ನಿರ್ದಾಕ್ಷಿಣ್ಯವಾಗಿ ಕ್ರಮ ಕೈಗೊಳ್ಳಲು ಸಹಕರಿಸಲು ತೀರ್ಮಾನಿಸಲಾಯಿತು.ಈ ವೇಳೆ: ಪಿಐ ವೀರಾರೆಡ್ಡಿ, ಅನೇಕ ಸಂಘ ಸಂಸ್ಥೆಗಳ ಮುಖಂಡರು, ಪೊಲೀಸ್ ಸಿಬ್ಬಂದಿಗಳು ಇದ್ದರು.

## ತುಂಗಭದ್ರಾ ಕಾಲೇಜುವತಿಯಿಂದ ಶೈಕ್ಷಣಿಕ ಪ್ರವಾಸ

ನೈಜ್ಯ ದೆಸೆ ನ್ಯೂಸ್



ಮಸ್ಕಿ : ಮಸ್ಕಿ ತಾಲೂಕಿನ ಮುದ್ದಾಪುರನ ತುಂಗಭದ್ರಾ ಪದವಿ ಪೂರ್ವ ಕಾಲೇಜುವತಿಯಿಂದ 2025–26 ನೇ ಸಾಲಿನ ಮೂರು ದಿನಗಳ ಶೈಕ್ಷಣಿಕ ಪ್ರವಾಸ ಕೈಗೊಳ್ಳಲಾಯಿತು ಇಂದು ಶಿರಸಿ ಮಾರಿಕಾಂಬ, ಜಗತಪ್ರಸಿದ್ದ ಜೋಗ ಜಲಪಾತವನ್ನು ವೀಕ್ಷಿಸಿದರು. ಈ ಸಂದರ್ಭದಲ್ಲಿ ಕಾಲೇಜು ಪ್ರಾಚಾರ್ಯ ಲಕ್ಷ್ಮಣ ಕರ್ಲಿ, ಸಂಸ್ಥೆ ಕಾರ್ಯದರ್ಶಿ ರಾಮಣ್ಣ ನಾಯಕ, ಉಪನ್ಯಾಸಕರಾದ ಹುಸೇನ ಭಾಷಾ, ಅಕ್ಕಮಹಾದೇವಿ, ವಿಜಯಲಕ್ಷ್ಮಿ, ಶ್ರೀಕಾಂತ ವಿದ್ಯಾರ್ಥಿಗಳು ಇದ್ದರು.

# ವಿವಿಧ ಬೇಡಿಕೆಗಳ ಈಡೇರಿಕೆಗೆ ಅಂಗವಿಕಲರ ಒತ್ತಾಯ

ನೈಜ್ಯ ದೆಸೆ ನ್ಯೂಸ್



ಕೊಪ್ಪಳ: ಅಂಗವಿಕಲರ ವಿವಿಧ ಬೇಡಿಕೆಗಳನ್ನು ಈಡೇರಿಸಬೇಕು ಎಂದು ಒತ್ತಾಯಿಸಿ ಕರ್ನಾಟಕ ಅಂಗವಿಕಲರ ರಾಜ್ಯ ಒಕ್ಕೂಟದ (ಕೆ.ಎ.ಆರ್.ಓ) ಜಿಲ್ಲಾ ಘಟಕದ ನೇತೃತ್ವದಲ್ಲಿ ಅಂಗವಿಕಲರು ನಗರದ ಜಿಲ್ಲಾಡಳಿತ ಭವನದ ಮುಂಭಾಗದಲ್ಲಿ ಶುಕ್ರವಾರ ಪ್ರತಿಭಟನೆ ನಡೆಸಿದರು.21 ರೀತಿಯ ಅಂಗವಿಕಲರಿಗೆ ಮಾಶಾಸನವನ್ನು 5000ಕ್ಕೆ ಏರಿಸಬೇಕು.ರಾಜ್ಯದಾದ್ಯಂತ ಎಲ್ಲರಿಗೂ ಉಚಿತ ಬಸ್‌ಪಾಸ್ ಸೌಲಭ್ಯ ಒದಗಿಸಬೇಕು. ಸ್ಥಳೀಯ ಸಂಸ್ಥೆಗಳಲ್ಲಿ ಅಂಗವಿಕಲರಿಗೆ ಮೀಸಲಾಗಿರುವ ಶೇ. 5 ಅನುದಾನ ಸಮರ್ಪಕವಾಗಿ ಬಳಕೆ ಮಾಡಬೇಕು, ಜಿಲ್ಲಾ ಮತ್ತು ತಾಲ್ಲೂಕು ಮಟ್ಟದ ಅಂಗವಿಕಲರ ಕುಂದುಕೊರತೆ ಸಭೆಗಳನ್ನು ನಿಯಮಿತವಾಗಿ ಹಮ್ಮಿಕೊಳ್ಳಬೇಕು ಎಂದು ಹೋರಾಟ ನಿರತರು ಆಗ್ರಹಿಸಿದರು.ಸ್ಥಳೀಯ ಸಂಸ್ಥೆಗಳ ಯೋಜನೆಯಲ್ಲಿ ನಿವೇಶನ ಅಥವಾ ಮನೆಯನ್ನು ಒದಗಿಸಬೇಕು. ಸ್ವಯಂ ಉದ್ಯೋಗ ಮಾಡಲು ವಿವಿಧ ಅಭಿವೃದ್ಧಿ ನಿಗಮಗಳಲ್ಲಿ ವಿಕಲಚೇತನರಿಗೆ ಸಾಲ ಸೌಲಭ್ಯ ಹೆಚ್ಚಿನ ಪ್ರಾದ್ಯಾನತೆ ನೀಡಬೇಕು ಎಂದು ಒಕ್ಕೂಟದ ಪದಾಧಿಕಾರಿಗಳು ಒತ್ತಾಯಿಸಿ ಜಿಲ್ಲಾ ಅಂಗವಿಕಲರ ಕಲ್ಯಾಣಾಧಿಕಾರಿ ವೆಂಕಟೇಶ ದೇಶಪಾಂಡೆ ಅವರಿಗೆ ಮನವಿ ಸಲ್ಲಿಸಿದರು. ಒಕ್ಕೂಟದ ರಾಜ್ಯ ಉಪಾಧ್ಯಕ್ಷ ಮಲ್ಲಿಕಾರ್ಜುನ್ ಪೂಜಾರ, ಜಿಲ್ಲಾಧ್ಯಕ್ಷ ಅನ್ವರ್ ಪಟೇಲ್, ಜಿಲ್ಲಾ ಪ್ರಧಾನ ಕಾರ್ಯದರ್ಶಿ ವೀರೇಶ ಹಾಲಗುಂಡಿ, ಜಿಲ್ಲಾ ಉಪಾಧ್ಯಕ್ಷ ಅನುರಾಧ ಬಾಳೆತೋಟ, ಖಜಾಂಚಿ ಮಂಜುನಾಥ ಮಂತ್ರಿ, ಕೋರ್ ಕಮಿಟಿ ಸದಸ್ಯರಾದ ಮಂಜುನಾಥ ಹೊಸಕೇರಿ, ಹನುಮಾಕ್ಷಿ ಹಣಗಿ, ಆದಪ್ಪ ಮಾಲಿಪಾಟೀಲ್, ಮಹಾಂತೇಶ ಹಿರೇಮಠ, ಸಿದ್ದಲಿಂಗಮ್ಮ ಹಾಲಗುಂಡಿ ಇದ್ದರು.

## ದುಮತಿಯಲ್ಲಿ ಅಂಬೇಡ್ಕರ್ ಪುತ್ಥಳಿ ಲೋಕಾರ್ಪಣೆ.

ನೈಜ್ಯ ದೆಸೆ ನ್ಯೂಸ್



ತಾಲೂಕಿನ ದುಮತಿ ಗ್ರಾಮದಲ್ಲಿ ಸಂವಿಧಾನ ಶಿಲ್ಪಿ ಭಾರತ ರತ್ನ ಡಾ.ಬಿ.ಆರ್ ಅಂಬೇಡ್ಕರ್ ಅವರ ಪುತ್ಥಳಿ ಲೋಕಾರ್ಪಣೆಗೊಳಿಸಲಾಯಿತು. ಈ ವೇಳೆ ಹಿರಿಯ ದಲಿತ ಮುಖಂಡರಾದ ತಿಕ್ಕಯ್ಯ ಬಳಗಾನೂರು, ದೇವೇಂದ್ರಪ್ಪ ನಾಯಕ ಯಾಪಲಪರ್ವಿ, ಭೀಮರಾಯ ಬಾಲಸ್ವಾಮಿ ಕೊಡ್ಲಿ ಮಾನ್ವಿ, ಶೇಖರಪ್ಪ ಗಿಣಿವಾರ, ಆರ್.ಅಂಬ್ರೂಸ್ ಕೊಡ್ಲಿ, ಹನುಮಂತಪ್ಪ ಮುದ್ದಾಪುರ, ಹುಲುಗಪ್ಪ ಉಪ್ಪಲದೊಡ್ಡಿ, ಸೇರಿದಂತೆ ಸಮಾಜದ ಬಂಧು ಬಾಂಧವರು ಸೇರಿ, ಅಂಬೇಡ್ಕರ್ ಅವರ ಪುತ್ತಳಿಯನ್ನು ಉದ್ಘಾಟಿಸಿ ಅನಾವರಣ ಗೊಳಿಸಿದರು. ಈ ಸಂದರ್ಭದಲ್ಲಿ: ಗ್ರಾಮದ ಮುಖಂಡರಾದ ಮಹಾದೇವ ದುಮತಿ, ಶೇಖರಪ್ಪ ದುಮತಿ ವಕೀಲರು, ಪ್ರವೀಣ್ ದುಮತಿ, ಜಾಕೊಬ್ ದೊಡ್ಮನೆ, ಸಣ್ಣ ಹುಸೇನಪ್ಪ, ಬಾಲಸ್ವಾಮಿ, ನಾರಾಯಣರೆಡ್ಡಿ, ದೇವೇಗೌಡ ಪೊಲೀಸ್ ಪಾಟೀಲ್, ಚೌಡಪ್ಪ ನಾಯಕ, ಅಯ್ಯನಗೌಡ, ಎನ್.ವೀರೇಶ ಉಪ್ಪಲದೊಡ್ಡಿ, ರಾಜು, ಮರಿಯಪ್ಪ ಸೇರಿದಂತೆ ಗ್ರಾಮಸ್ಥರು ಇದ್ದರು.

# ವೋಟ್ ಚೋರ್ ಗದ್ದಿ ಚೋಡ್" ಲಕ್ಷಾಂತರ ಕಾರ್ಯಕರ್ತರು ಮತ್ತು ನಾಯಕರು ಮಹಾರ್‍ಯಾಲಿಯಲ್ಲಿ ಸಚಿವ ಎನ್ ಎಸ್ ಬೋಸರಾಜು ಭಾಗಿ



ನೈಜ್ಯ ದೆಸೆ ನ್ಯೂಸ್

ದೆಹಲಿ : ಇಂದು ನವದೆಹಲಿಯ ರಾಮಲೀಲಾ ಮೈದಾನದಲ್ಲಿ ಕಾಂಗ್ರೆಸ್ ಪಕ್ಷದ ವತಿಯಿಂದ ಜರುಗಿದ "ವೋಟ್ ಚೋರ್ ಗದ್ದಿ ಚೋಡ್" ಬೃಹತ್ ಹೋರಾಟದಲ್ಲಿ ಕರ್ನಾಟಕ ಪ್ರದೇಶ ಕಾಂಗ್ರೆಸ್ ಸಮಿತಿಯ ಅಧ್ಯಕ್ಷರ ನೇತೃತ್ವ ತಂಡದೊಂದಿಗೆ ಸಣ್ಣ ನೀರಾವರಿ ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವರು ಹಾಗೂ ಪರಿಷತ್ತಿನ ಸಭಾ ನಾಯಕರು ಕೊಡಗು ಜಿಲ್ಲಾ ಉಸ್ತುವಾರಿ ಸಚಿವರಾದ ಶ್ರೀ ಎನ್ ಎಸ್ ಬೋಸರಾಜು ಅವರು ಭಾಗವಹಿಸಿದ್ದರು. ಚುನಾವಣಾ ಅಕ್ರಮಗಳು ಮತ್ತು 'ವೋಟ್ ಕಳ್ಳತನ' ಆರೋಪಗಳ ವಿರುದ್ಧ ಧ್ವನಿ ಎತ್ತಲು ದೇಶದ ಮೂಲೆ ಮೂಲೆಗಳಿಂದ ಲಕ್ಷಾಂತರ ಕಾರ್ಯಕರ್ತರು ಮತ್ತು ನಾಯಕರು ಮಹಾರ್‍ಯಾಲಿಯಲ್ಲಿ ಭಾಗವಹಿಸಿ ಯಶಸ್ವಿಗೊಳಿಸಿದರು.ಪ್ರಜಾಪ್ರಭುತ್ವದ ರಕ್ಷಣೆ ಮತ್ತು ಜನರ ಮತದ ಹಕ್ಕಿನ ಸುರಕ್ಷತೆಗಾಗಿ ಕಾಂಗ್ರೆಸ್ ಪಕ್ಷವು ಬದ್ಧವಾಗಿದೆ. ಇದು ನಿರ್ಣಾಯಕ ರಾಜಕೀಯ ಹೋರಾಟದತ್ತ ಒಂದು ಪ್ರಮುಖ ಹೆಜ್ಜೆ. ಎಂದು ಎನ್ ಎಸ್ ಬೋಸರಾಜ್ ಅವರು ಸುದ್ದಿಗಾರರಿಗೆ ತಿಳಿಸಿದ್ದಾರೆ.

# ಮಾರೆಮ್ಮ ದೇವಿ ಹಾಗೂ ಶ್ರೀ ಆಂಜನೇಯ ಸ್ವಾಮಿ ಜಾತ್ರಾ ಮಹೋತ್ಸವಕ್ಕೆ ಶಾಸಕರಿಂದ ಚಾಲನೆ

ನೈಜ್ಯ ದೆಸೆ ನ್ಯೂಸ್



ಮಾನ್ವಿ: ತಾಲೂಕಿನ ದದ್ದಲ್ ಗ್ರಾಮದಲ್ಲಿನ ಗ್ರಾಮದೇವತೆ ಮಾರೆಮ್ಮ ದೇವಿ ಹಾಗೂ ಶ್ರೀ ಆಂಜನೇಯ ಸ್ವಾಮಿ ಜಾತ್ರಾ ಮಹೋತ್ಸವ ಅಂಗವಾಗಿ ನಡೆದ ವಿವಿಧ ಧಾರ್ಮಿಕ ಕಾರ್ಯಕ್ರಮಗಳನ್ನು ದೇವಸ್ಥಾನದಲ್ಲಿ ವಿಶೇಷ ಪೂಜೆ ಸಲ್ಲಿಸುವ ಮೂಲಕ ಶಾಸಕ ಹಂಪಯ್ಯ ನಾಯಕ ಹಾಗೂ ರಾಯಚೂರು ಗ್ರಾಮೀಣ ವಿಧಾನಸಭಾ ಕ್ಷೇತ್ರದ ಶಾಸಕರು ಹಾಗೂ ಶ್ರೀ ಮಹರ್ಷಿ ವಾಲ್ಮೀಕಿ ನಿಗಮದ ರಾಜ್ಯಧ್ಯಾಕ್ಷರಾದ ಬಸವನಗೌಡ ದದ್ದಲ್ ಚಾಲನೆ ನೀಡಿದರು. ಶಾಸಕ ಹಂಪಯ್ಯ ನಾಯಕ ಗ್ರಾಮಸ್ಥಾರಿಂದ ಮನವಿ ಸ್ವಿಕರಿಸಿ ಮಾತನಾಡಿ ಗ್ರಾಮದ ಜನರ ಬೇಡಿಕೆಯಂತೆ ಕಾತರಕಿ ಯಿಂದ ದದ್ದಲ್ ಗಡಿಯವರೆಗಿನ 2.5 ಕಿಲೋಮಿಟರ್ ರಸ್ತೆ ಕಾಮಗಾರಿಯನ್ನು 3 ಕೋಟಿ ರೂ ವೆಚ್ಚದಲ್ಲಿ ಕೈಗೊಳ್ಳಲಾಗಿದ್ದು ಅದಷ್ಟು ಶೀಘ್ರವಾಗಿ ಟೆಂಡರ್ ಪ್ರಕ್ರಿಯೆಯನ್ನು ಪೂರ್ಣಗೊಳಿಸಿ ಕಾಮಗಾರಿ ಪೂರ್ಣ ಗೊಳಿಸುವಂತೆ ಲೋಕೋಪಯೋಗಿ ಇಲಾಖೆ ಅಭಿಯಂತರರಿಗೆ ಸೂಚಿಸಿದರು ಹಾಗೂ ಗ್ರಾಮದಲ್ಲಿ ಕುಡಿಯುವ ನೀರಿನ ಸಮಸ್ಯೆ ನಿವಾರಣೆಗೆ ಅಗತ್ಯ ಕ್ರಮ ಕೈಗೊಳ್ಳುವುದಾಗಿ ಬರವಸೆ ನೀಡಿದರು. ಗ್ರಾಮದ ಮುಖಂಡರಾದ ಅಯ್ಯನಗೌಡ ನಾಯಕ್, ಮೌನೇಶ್ ನಾಯಕ್, ಗೋವಿಂದ್ ರಾಜ್, ಸೇರಿದಂತೆ ಇನ್ನಿತರರು ಇದ್ದರು.

# ಬಹುತೇಕ ತರಕಾರಿಗಳ ಬೆಲೆ ಸ್ಥಿರ

ನೈಜ್ಯ ದೆಸೆ ನ್ಯೂಸ್



ರಾಯಚೂರು: ತರಕಾರಿ ಸಗಟು ಮಾರುಕಟ್ಟೆಯಲ್ಲಿ ಗ್ರಾಹಕರು ಹೆಚ್ಚು ಇಷ್ಟಪಡುವ ನಾಲ್ಕು ತರಕಾರಿಗಳನ್ನು ಬಿಟ್ಟರೆ ಉಳಿದೆಲ್ಲ ತರಕಾರಿಗಳ ಬೆಲೆ ಸ್ಥಿರವಾಗಿದೆ.ಪ್ರತಿ ಕ್ವಿಂಟಲ್‌ಗೆ ಬೆಳ್ಳುಳ್ಳಿ ₹ 3 ಸಾವಿರ, ಬೆಂಡೆಕಾಯಿ, ನುಗ್ಗೆಕಾಯಿ ₹ 2 ಸಾವಿರ, ಬದನೆಕಾಯಿ, ಸೌತೆಕಾಯಿ ₹ 1 ಸಾವಿರ ಹಾಗೂ ಈರುಳ್ಳಿ ಬೆಲೆ ₹ 500 ಹೆಚ್ಚಾಗಿದೆ. ಆಲೂಗಡ್ಡೆ, ಮೆಣಸಿನಕಾಯಿ, ಹಿರೇಕಾಯಿ, ತೊಂಡೆಕಾಯಿ, ಡೊಣಮೆಣಸಿನಕಾಯಿ, ತುಪ್ಪದ ಹಿರೇಕಾಯಿ, ಎಲೆಕೋಸು, ಗಜ್ಜರಿ ಹಾಗೂ ಬೀನ್ಸ್ ಬೆಲೆ ಸ್ಥಿರವಾಗಿದೆ. ಪ್ರತಿ ಕ್ವಿಂಟಲ್‌ಗೆ ಹೂಕೋಸು ₹ 2,500, ಚವಳೆಕಾಯಿ ₹ 2 ಸಾವಿರ, ಬೀಟ್‌ರೂಟ್ ₹ 1,500, ಟೊಮೆಟೊ ₹ 1 ಸಾವಿರ ಕಡಿಮೆಯಾಗಿದೆ.ವಿಪರೀತ ಚಳಿ ಇರುವ ಕಾರಣ ಬೆಳಿಗ್ಗೆ ಹಾಗೂ ಸಂಜೆ ವೇಳೆ ಜನ ಮನೆಯಿಂದ ಹೊರ ಬರಲು ಹಿಂಜರಿಯುತ್ತಿದ್ದಾರೆ. ಬೆಲೆ ಏರಿದರೂ ನುಗ್ಗೆಕಾಯಿ ಬೇಡಿಕೆ ಕಡಿಮೆಯಾಗಿಲ್ಲ. ಹಿರೇಕಾಯಿ, ತೊಂಡೆಕಾಯಿ ಮಾರುಕಟ್ಟೆಯಲ್ಲಿ ಗತ್ತು ಉಳಿಸಿಕೊಂಡಿವೆ.ಎಲೆಕೋಸು ಹಾಗೂ ಹೂಕೋಸು ಬೆಲೆ ಇಳಿದಿರುವ ಕಾರಣ ಗ್ರಾಹಕರು ಸಂಜೆ ವೇಳೆಯಲ್ಲಿ ಮಂಚೂರಿ ಮಾಡಿ ಉಪಾಹಾರವಾಗಿ ಸೇವಿಸಲು ಒಯ್ಯುತ್ತಿದ್ದಾರೆ. ಈ ವಾರ ಬೀನ್ಸ್ ಗ್ರಾಹಕರ ಕಾಯ್ದಿದೆ. ಮಹಾರಾಷ್ಟ್ರದ ನಾಸಿಕ್‌ನಿಂದ ಈರುಳ್ಳಿ ಹಾಗೂ ಬೆಳ್ಳುಳ್ಳಿ , ಬೆಳಗಾವಿ ಹಾಗೂ ಬೈಲಹೊಂಗಲ ತಾಲ್ಲೂಕಿನಿಂದ ಹಸಿ ಮೆಣಸಿನಕಾಯಿ, ಕೊತಂಬರಿ, ಮೆಂತೆ, ಸಬ್ಬಸಗಿ ಸೊಪ್ಪು ಬಂದಿದೆ. ಆಂಧ್ರಪ್ರದೇಶದ ಗಡಿ ಗ್ರಾಮ ಹಾಗೂ ಜಿಲ್ಲೆಯ ಗ್ರಾಮೀಣ ಪ್ರದೇಶಗಳಿಂದ ಸ್ವಲ್ಪ ಎಲೆಕೋಸು, ಹೂಕೋಸು, ಬದನೆಕಾಯಿ, ಅವರೆಕಾಯಿ ಇಲ್ಲಿಯ ತರಕಾರಿ ಸಗಟು ಮಾರುಕಟ್ಟೆಗೆ ಬಂದಿದೆ.'ತರಕಾರಿ ಮಾರುಕಟ್ಟೆಯಲ್ಲಿ ಕೆಲ ತರಕಾರಿ ಬೆಲೆಗಳಲ್ಲಿ ಏರಿಳಿತವಾಗಿದೆ. ಕಡಿಮೆಯಾಗಿವೆ. ನುಗ್ಗೆಕಾಯಿ ಬೆಲೆ ಕಡಿಮೆಯಾಗಿಲ್ಲ' ಎಂದು ತರಕಾರಿ ವ್ಯಾಪಾರಿ ಸುನೀಲಕುಮಾರ ಹೇಳುತ್ತಾರೆ.

# 12 ಜನ ವಿದ್ಯಾರ್ಥಿಗಳ ಉದ್ಯೋಗಕ್ಕೆ ಆಯ್ಕೆ

ನೈಜ್ಯ ದೆಸೆ ನ್ಯೂಸ್




ವಿಜಯಪುರ ನಗರದ ಪ್ರತಿಷ್ಠಿತ ಬಿ.ಎಲ್.ಡಿ.ಇ ಸಂಸ್ಥೆಯ ಶ್ರೀ ಸಂಗನಬಸವ ಮಹಾಸ್ವಾಮೀಜಿ ಪಾಲಿಟೆಕ್ನಿಕ್ ವಿದ್ಯಾಲಯದ 12 ಜನ ವಿದ್ಯಾರ್ಥಿಗಳು ದಕ್ಷಿಣ ಕೋರಿಯಾದ ಪ್ರತಿಷ್ಠಿತ ಸಿ.ಎನ್.ಸಿ. ಯಂತ್ರಗಳ ಉತ್ಪಾದಕ ಸಂಸ್ಥೆ ಡಿ ಎನ್ ಸೊಲುಶನ್ಸ್ ನಡೆಸಿದ ಕ್ಯಾಂಪಸ್ ಸಂದರ್ಶನದಲ್ಲಿ ಆಯ್ಕೆಯಾಗಿ ಉದ್ಯೋಗ ಗಿಟ್ಟಿಸಿದ್ದಾರೆ. ಡಿ. ಎನ್. ಸೊಲುಶನ್ಸ್ ಸಂಸ್ಥೆಯ ಬೆಂಗಳೂರು ವಿಭಾಗದ ಉಪಾಧ್ಯಕ್ಷ ಸುರೇಶ ನಾರಾಯಣ ಮತ್ತು ಮಾನವ ಸಂಪನ್ಮೂಲ ವಿಭಾಗದ ಸ್ಮಿತಾ ಆರ್. ಅವರು ಶುಕ್ರವಾರ ವಿದ್ಯಾರ್ಥಿಗಳಿಗೆ ಕ್ಯಾಂಪಸ್ ಸಂದರ್ಶನ ನಡೆಸಿ ಆಯ್ಕೆಯಾದ 12 ಜನರಿಗೆ ನೇಮಕಾತಿ ಆದೇಶ ಪತ್ರ ವಿತರಿಸಿದರು. ಈ ಸಂದರ್ಭದಲ್ಲಿ ಕಾಲೇಜಿನ ಪ್ರಾಚಾರ್ಯ ಪ್ರಭುದೇವ ಬಿ. ಕಳಸಗೊಂಡ, ಉದ್ಯೋಗ ವಿಭಾಗದ ಅಧಿಕಾರಿ ಸುಧನ್ವ, ವಿ. ಕುಲಕರ್ಣಿ, ಸಂತೋಷ ಹಿರೇಮಠ, ಪಾಂಡುರಂಗ ಅಸ್ಲಂಕರ್, ಮೆಕ್ಯಾನಿಕಲ್ ವಿಭಾಗದ ಮುಖ್ಯಸ್ಥ ಎಂ. ಸಿ. ಬಿರಾದಾರ, ಕಂಪ್ಯೂಟರ ಸಾಯಿನ್ಸ್ ವಿಭಾಗದ ಮುಖ್ಯಸ್ಥ ಎಂ. ಎಸ್. ಬೇನಾಳ, ಸಿವ್ಹಿಲ್ ವಿಭಾಗದ ಮುಖ್ಯಸ್ಥೆ ಸುನಿತಾ ಲಕ್ವಾಣಿ, ಇ ಮತ್ತು ಸಿ ವಿಭಾಗದ ಮುಖ್ಯಸ್ಥೆ ಸುರೇಖಾ ಸುಣಗಾ, ಇ ಮತ್ತು ಇ ವಿಭಾಗದ ಮುಖ್ಯಸ್ಥೆ ಸವಿತಾ ಜೋಶಿ ಹಾಗೂ ನಾನಾ ವಿಭಾಗಗಳ ಉದ್ಯೋಗ ವಿಭಾಗದ ಅಧಿಕಾರಿಗಳು, ಬೋಧಕ ಸಿಬ್ಬಂದಿ ಉಪಸ್ಥಿತರಿದ್ದರು. ಕ್ಯಾಂಪಸ್ ಸಂದರ್ಶನದಲ್ಲಿ ಆಯ್ಕೆಯಾದ ಎಲ್ಲಾ ವಿದ್ಯಾರ್ಥಿಗಳಿಗೆ ಬಿ.ಎಲ್.ಡಿ.ಇ. ಸಂಸ್ಥೆಯ ಅಧ್ಯಕ್ಷ ಎಂ. ಬಿ. ಪಾಟೀಲ ಮತ್ತು ಪ್ರಧಾನ ಕಾರ್ಯದರ್ಶಿ ಸುನೀಲಗೌಡ ಬ. ಪಾಟೀಲ ಹಾಗೂ ಸಂಸ್ಥೆಯ ಎಲ್ಲ ಆಡಳಿತ ಮಂಡಳಿ ನಿರ್ದೇಶಕರು ಅಭಿನಂದನೆ ಸಲ್ಲಿಸಿದ್ದಾರೆ.

## ಶಿಕ್ಷಣ ಮಾರ್ಗದರ್ಶಿ ವಿಶೇಷ

### MD ಇಲ್ಮುಲ್ ಅದ್ವಿಯಾ

MD ಇಲ್ಮುಲ್ ಅದ್ವಿಯಾ ಯುನಾನಿ ವೈದ್ಯಕೀಯ ಪದ್ಧತಿಯಲ್ಲಿನ ಪ್ರಮುಖ ಸ್ನಾತಕೋತ್ತರ ಕೋರ್ಸ್ ಆಗಿದ್ದು, ಯುನಾನಿ ಔಷಧಗಳ ಮೂಲ, ತಯಾರಿಕೆ, ಕ್ರಿಯಾವಿಧಾನ, ಪ್ರಮಾಣ, ಸುರಕ್ಷತೆ ಹಾಗೂ ವೈಜ್ಞಾನಿಕ ಮೌಲ್ಯಮಾಪನದ ಮೇಲೆ ವಿಶೇಷ ಗಮನ ನೀಡುತ್ತದೆ. ಈ ಕೋರ್ಸ್‌ವು ಪರಂಪರ ಜ್ಞಾನವನ್ನು ಆಧುನಿಕ ವಿಜ್ಞಾನ ಹಾಗೂ ಸಂಶೋಧನಾ ತಂತ್ರಜ್ಞಾನಗಳೊಂದಿಗೆ ಸಂಯೋಜಿಸುತ್ತದೆ.ಕೋರ್ಸ್‌ನ ಉದ್ದೇಶಗಳು ಯುನಾನಿ ಔಷಧಗಳ ವೈಜ್ಞಾನಿಕ ಅರಿವು ಬೆಳೆಸುವುದು ಔಷಧ ತಯಾರಿಕೆಯಲ್ಲಿ ಗುಣಮಟ್ಟ ಹಾಗೂ ಮಾನದಂಡಗಳನ್ನು ಪಾಲಿಸುವುದು ಔಷಧಗಳ ಸುರಕ್ಷತೆ ಮತ್ತು ಪರಿಣಾಮಕಾರಿತ್ವವನ್ನು ಮೌಲ್ಯಮಾಪನ ಮಾಡುವುದು ಸಂಶೋಧನೆ ಮತ್ತು ಹೊಸ ಔಷಧ ಅಭಿವೃದ್ಧಿಗೆ ತರಬೇತಿ ನೀಡುವುದು ಸಸ್ಯಜ, ಖನಿಜ ಮತ್ತು ಪ್ರಾಣಿ ಮೂಲದ ಔಷಧಗಳ ಅಧ್ಯಯನ ಅರ್ಹತೆ : ಮಾನ್ಯತೆ ಪಡೆದ ಸಂಸ್ಥೆಯಿಂದ ಃಗಒಖ (Bachelor of Unani Medicine and Surgery) ಪದವಿ ಪ್ರವೇಶ ಪರೀಕ್ಷೆ (ಸಾಮಾನ್ಯವಾಗಿ AIAPGET ಅಥವಾ ಸಂಬಂಧಿತ ವಿಶ್ವವಿದ್ಯಾಲಯದ ಪರೀಕ್ಷೆ) ಇಂಟ-ರ್ನ್‌ಶಿಪ್ ಪೂರ್ಣಗೊಳಿಸಿರಬೇಕು ಪ್ರವೇಶ ಪ್ರಕ್ರಿಯೆ1. ಪ್ರವೇಶ ಪರೀಕ್ಷೆಗೆ ಅರ್ಜಿ ಸಲ್ಲಿಕೆ2. ಮೆರಿಟ್ ಆಧಾರದ ಮೇಲೆ ಆಯ್ಕೆ3. ಕೌನ್ಸೆಲಿಂಗ್ ಪ್ರಕ್ರಿಯೆ ಪಠ್ಯಕ್ರಮದ ಮುಖ್ಯ ವಿಷಯಗಳು ಇಲ್ಮುಲ್ ಅದ್ವಿಯಾ ಮುಫ್ರದಾ (Single Drugs) ಇಲ್ಮುಲ್ ಅದ್ವಿಯಾ ಮುರಕ್ಕಬಾ (Compound Drug) ಫಾರ್ಮಕೋಗ್ನೋಸಿ (Pharmacognosy)ಫಾರ್ಮಕೋಡೈನಾಮಿಕ್ಸ್ ಮತ್ತು ಫಾರ್ಮಕೋಕಿನೆಟಿಕ್ಸ್ ಔಷಧ ತಯಾರಿಕೆ ಮತ್ತು ಪ್ರಮಾಣ ನಿರ್ಧಾರ ವಿಷವಿಜ್ಞಾನ (Toxicology) ಗುಣಮಟ್ಟ ನಿಯಂತ್ರಣ ಮತ್ತು ಮಾನದಂಡೀಕರಣ HPLC, TLC, GC ಮುಂತಾದ ಆಧುನಿಕ ತಂತ್ರಜ್ಞಾನಗಳು ಪ್ರಾಣಿಗಳ ಮೇಲೆ ಔಷಧ ಪರೀಕ್ಷೆಗಳು ಔಷಧ ಮ್ಯೂಸಿಯಂ ಮತ್ತು ಹರ್ಬೇರಿಯಂ ಅಧ್ಯಯನ ಸಂಶೋಧನೆ ಮತ್ತು ಥಿಸಿಸ್ ಪ್ರತಿಯೊಬ್ಬ ವಿದ್ಯಾರ್ಥಿಯು ಮೂಲ ಸಂಶೋಧನಾ ಥಿಸಿಸ್ ಸಲ್ಲಿಸಬೇಕು ಸಸ್ಯ ಔಷಧಗಳು, ಹೊಸ ಸಂಯೋಜನೆಗಳು, ಸುರಕ್ಷತಾ ಅಧ್ಯಯನಗಳು ಪ್ರಯೋಗಾಲಯ ಮತ್ತು ಪ್ರಾಣಿಗಳ ಅಧ್ಯಯನಗಳ ಮೂಲಕ ಸಂಶೋಧನೆ ವೃತ್ತಿ ಅವಕಾಶಗಳು (Career Opportunitie) ಯುನಾನಿ ಔಷಧ ಉದ್ಯಮಗಳಲ್ಲಿ ಸಂಶೋಧಕ ಫಾರ್ಮಾಸ್ಯೂಟಿಕಲ್ ಕಂಪನಿಗಳಲ್ಲಿ Quality Control Officer ಡ್ರಗ್ ಇನ್ಸ್ಪೆಕ್ಟರ್ (ಸರ್ಕಾರಿ ಸೇವೆ) ಕಾಲೇಜುಗಳಲ್ಲಿ ಉಪನ್ಯಾಸಕ / ಪ್ರಾಧ್ಯಾಪಕ ಸಂಶೋಧನಾ ಸಂಸ್ಥೆಗಳಲ್ಲಿ ವಿಜ್ಞಾನಿ ಸ್ವಂತ ಔಷಧ ತಯಾರಿಕಾ ಘಟಕ ಸ್ಥಾಪನೆ ಉದ್ಯೋಗ ಕ್ಷೇತ್ರಗಳು ಂಜಗಖಊ ಆಸ್ಪತ್ರೆಗಳು ಯುನಾನಿ ಫಾರ್ಮಾಸ್ಯೂಟಿಕಲ್ ಇಂಡಸ್ಟ್ರಿ ಸಂಶೋಧನಾ ಲ್ಯಾಬೊರೇಟ-ರಿಗಳು ಸರ್ಕಾರದ ಆರೋಗ್ಯ ಇಲಾಖೆ ಔಷಧ ನಿಯಂತ್ರಣ ಸಂಸ್ಥೆಗಳು ಪ್ರಮುಖ ಸಂಸ್ಥೆಗಳು NIUM, ಬೆಂಗಳೂರು ಜಾಮಿಯಾ ಹಮ್ದರ್ದ್, ನವದೆಹಲಿರಾಜ್ಯ ಹಾಗೂ ಕೇಂದ್ರ ಸರ್ಕಾರ ಮಾನ್ಯತೆ ಪಡೆದ ಯುನಾನಿ ಕಾಲೇಜು ಔಷಧ ಸಂಶೋಧನೆಗೆ ಆಸಕ್ತಿ ಇರುವವರು ಯುನಾನಿ ಫಾರ್ಮಸಿ ಮತ್ತು ಕೈಗಾರಿಕೆಯಲ್ಲಿ ಕೆಲಸ ಮಾಡಲು ಬಯಸುವವರು. ಅಧ್ಯಾಪನೆ ಮತ್ತು ವಿಜ್ಞಾನ ಕ್ಷೇತ್ರದಲ್ಲಿ ಮುಂದುವರಿಯಲು ಬಯಸುವವರು ಈ ಕೋರ್ಸ್ ಅನ್ನು ಮಾಡಬಹುದು

## ಬಾಪೂಜಿ ಶಿಕ್ಷಣ ಸಂಸ್ಥೆಗಳ ಸಂಸ್ಥಾಪಕ ಶಾಮನೂರು ಶಿವಶಂಕರಪ್ಪ ಇನ್ನಿಲ್ಲ



ನೈಜ್ಯ ದೇಸೆ ನ್ಯೂಸ್

ಹಿರಿಯ ಮುತ್ಸದ್ದಿ, ಅಖಿಲ ಭಾರತ ವೀರಶೈವ ಮಹಾಸಭಾದ ರಾಷ್ಟ್ರೀಯ ಅಧ್ಯಕ್ಷರು, ಶ್ರೀ ಶಾಮನೂರು ಶಿವಶಂಕರಪ್ಪ ಅವರು ನಿಧನರಾದ ಸುದ್ದಿ ಅತ್ಯಂತ ದುಃಖಕರ.ಅಗಲಿದ ಮಹಾನ್ ನಾಯಕರಿಗೆ ಭಾವಪೂರ್ಣ ಶ್ರದ್ಧಾಂಜಲಿ.ಅವರ ಆತ್ಮಕ್ಕೆ ಶಾಂತಿ ದೊರಕಲಿ, ದುಃಖಿತ ಕುಟುಂಬ ವರ್ಗಕ್ಕೆ ಹಾಗೂ ಅಭಿಮಾನಿಗಳಿಗೆ ದೇವರು ಧೈರ್ಯ ನೀಡಲಿ.

# ಹಿಂದುಳಿದ ಬ್ರಾಹ್ಮಣ ವಿದ್ಯಾರ್ಥಿಗಳ ಶೈಕ್ಷಣಿಕ ಏಳಿಗೆಗಾಗಿ ಶಿಷ್ಯವೇತನ ಯೋಜನೆ

ನೈಜ್ಯ ದೇಸೆ ನ್ಯೂಸ್

ಬೆಂಗಳೂರು : ಕರ್ನಾಟಕ ರಾಜ್ಯ ಬ್ರಾಹ್ಮಣ ಅಭಿವೃದ್ಧಿ ಮಂಡಳಿಯು ಆರ್ಥಿಕವಾಗಿ ಹಿಂದುಳಿದ ಬ್ರಾಹ್ಮಣ ವಿದ್ಯಾರ್ಥಿಗಳ ಶೈಕ್ಷಣಿಕ ಏಳಿಗೆಗಾಗಿ ಸಾಂದೀಪನಿ ಶಿಷ್ಯವೇತನ ಯೋಜನೆ ಆರಂಭಿಸಿದೆ. ಈ ಯೋಜನೆ ಅನ್ವಯ 2025–26ನೇ ಸಾಲಿನಲ್ಲಿ ಬ್ರಾಹ್ಮಣ ವಿದ್ಯಾರ್ಥಿಗಳಿಗೆ 1.15 ಲಕ್ಷ ರೂಪಾಯಿವರೆಗೆ ಸ್ಕಾಲರ್ ಶಿಪ್ ನೀಡುವುದಾಗಿ ಘೋಷಣೆ ಮಾಡಿದೆ. ಅರ್ಹ ಹಾಗೂ ಆಸಕ್ತ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಿದೆ. ಅರ್ಜಿ ಸಲ್ಲಿಕೆಗೆ 2026ರ ಫೆಬ್ರವರಿ 28 ಕೊನೆಯ ದಿನವಾಗಿದೆ. ರಾಜ್ಯ ಸರ್ಕಾರದ ಅನುದಾನದೊಂದಿಗೆ ಬ್ರಾಹ್ಮಣ ಸಮುದಾಯದವರ ಶಿಕ್ಷಣದ ಪ್ರಗತಿಗಾಗಿ ರೂಪಿಸಿರುವ ಯೋಜನೆ ಇದಾಗಿದೆ. ಎರಡು ವಿಧಗಳಲ್ಲಿ ವಿದ್ಯಾರ್ಥಿಗಳಿಗೆ ಸ್ಕಾಲರ್ ಶಿಪ್ ನೀಡಲಾಗುತ್ತದೆ. ಪಿಯುಸಿ, ಡಿಪ್ಲೋಮಾ ಹಾಗೂ ಪದವಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳಿಗೆ ಮಾಸಿಕ 1,500 ರೂಪಾಯಿಯಂತೆ 10 ತಿಂಗಳಿಗೆ ಒಟ್ಟು 15 ಸಾವಿರ ರೂಪಾಯಿ ನೀಡುವುದು ಒಂದು ವಿಧದ ಶಿಷ್ಯವೇತನವಾಗಿದೆ. ಇನ್ನೊಂದು ವಿಧದಲ್ಲಿ, ಸಿಇಟಿಯಲ್ಲಿ ಅರ್ಹತೆ ಪಡೆದು ಪದವಿ ಅಥವಾ ಸ್ನಾತಕೋತ್ತರ ವೃತ್ತಿಪರ ಕೋರ್ಸ್ ಗಳಿಗೆ ದಾಖಲಾದ ವಿದ್ಯಾರ್ಥಿಗಳಿಗೆ ಶುಲ್ಕ ಮರುಪಾವತಿ ಸಹಾಯಧನ ನೀಡಲಾಗುತ್ತದೆ. ವಿದ್ಯಾರ್ಥಿಗಳು ದಾಖಲಾತಿ ಸಂದರ್ಭದಲ್ಲಿ ಪಾವತಿಸಿರುವ ಸರ್ಕಾರಿ ಶುಲ್ಕದ ಮೂರನೆ ಎರಡಷ್ಟು ಭಾಗವನ್ನು (ಗರಿಷ್ಠ ಮೊತ್ತ 1 ಲಕ್ಷ ರೂ.ವರೆಗೆ) ಸಹಾಯಧನವಾಗಿ ಪಾವತಿಸಲಾಗುತ್ತದೆ. ಮತ್ತೊಂದು ಗಮನಿಸಬೇಕಾದ ಅಂಶವೆಂದರೆ, ಮ್ಯಾನೇಜ್ ಮೆಂಟ್ ಸೀಟ್ ಪಡೆದ ವಿದ್ಯಾರ್ಥಿಗಳು, ಶುಲ್ಕ ಮರುಪಾವತಿ ಮತ್ತು ವಾರ್ಷಿಕ ನಿರ್ವಹಣಾ ವೆಚ್ಚ ಪಾವತಿಗೆ ಅರ್ಹರಿಲ್ಲ. ಅರ್ಜಿದಾರರು ಬ್ರಾಹ್ಮಣ ಸಮುದಾಯಕ್ಕೆ ಸೇರಿರಬೇಕು. ವಿದ್ಯಾರ್ಥಿಯ ಪೋಷಕರ ವಾರ್ಷಿಕ ಆದ-ಾಯ 8 ಲಕ್ಷ ರೂಪಾಯಿ ಮೀರಿರಬಾರದು. ಕರ್ನಾಟಕ ಸ್ಟೇಟ್ ಸಿಲಬಸ್ ಅಳವಡಿಸಿಕೊಂಡ ಕೋರ್ಸ್ ಗಳಿಗೆ ಪ್ರವೇಶ ಪಡೆದಿರಬೇಕು. ಕರ್ನಾಟಕದ ಕಾಯಂ ನಿವಾಸಿಯಾಗಿರಬೇಕು. ಜಾತಿ, ಆದಾಯ ಪ್ರಮಾಣಪತ್ರ, ಶೈಕ್ಷಣಿಕ ಪ್ರಮಾಣಪತ್ರ, ಆಧಾರ್ ಕಾರ್ಡ್ ಸೇರಿ ಹಲವು ದಾಖಲೆಗಳನ್ನು ಸಲ್ಲಿಸಬೇಕು. ಅರ್ಜಿ ಸಲ್ಲಿಸುವವರು **ssp.postmatric.karnataka.gov.in/** ಗೆ ಭೇಟಿ ನೀಡಬಹುದು.

# ದೇಶದ ಮೊದಲ ಮಿದುಳು ಸ್ಟೆಂಟ್ ಕ್ಲಿನಿಕಲ್ ಟ್ರಯಲ್ ಯಶಸ್ವಿ

ನೈಜ್ಯ ದೇಸೆ ನ್ಯೂಸ್

ದೆಹಲಿಯ ಅಖಿಲ ಭಾರತ ವೈದ್ಯ ವಿಜ್ಞಾನಗಳ ಸಂಸ್ಥೆ(ಏಮ್ಸ್) ವೈದ್ಯರು ತೀವ್ರ ಸ್ವರೂಪದ ಪಾರ್ಶ್ವವಾಯು ಚಿಕಿತ್ಸೆಗಾಗಿ ಅಭಿವೃದ್ಧಿಪಡಿಸಿದ ಮಿದುಳು ಸ್ಟೆಂಟ್ ನ(ಸುಧಾರಿತ ಪಾರ್ಶ್ವವಾಯು ಸಾಧನ) ಕ್ಲಿನಿಕಲ್ ಟ್ರಯಲ್ ಅನ್ನು ಯಶಸ್ವಿಯಾಗಿ ನಡೆಸಿದ್ದಾರೆ.ಇದು ದೇಶದಲ್ಲೇ ನಡೆಸಿದ ಮಿದುಳು ಸ್ಟೆಂಟ್ ನ ಮೊದಲ ಕ್ಲಿನಿಕಲ್ ಟ್ರಯಲ್ ಆಗಿದ್ದು, ಈ ಮೂಲಕ ಏಮ್ಸ್ ವೈದ್ಯರು ಗಮನ ಸೆಳೆದಿದ್ದಾರೆ. ಏಮ್ಸ್ ನ್ಯೂರೊ ಇಮೇಜಿಂಗ್ ವಿಭಾಗದ ಮುಖ್ಯಸ್ಥ ಡಾ. ಶೈಲೇಶ್ ಬಿ. ಗಾಯಕ್ವಾಡ್ ಈ ಬಗ್ಗೆ ಮಾಹಿತಿ ನೀಡಿ, ಮಿದುಳು ಸ್ಟೆಂಟ್ ಸುರಕ್ಷಿತವಾಗಿದೆ. ಪಾರ್ಶ್ವವಾಯು ಚಿಕಿತ್ಸೆಯಲ್ಲಿ ಪರಿಣಾಮಕಾ-ರಿಯಾಗಿದೆ. ಎನ್ನುವುದು ಕ್ಲಿನಿಕಲ್ ಟ್ರಯಲ್ ನಲ್ಲಿ ದೃಢಪಟ್ಟಿದೆ ಎಂದು ತಿಳಿಸಿದ್ದಾರೆ, ಜರ್ನಲ್



ಆಫ್ ನ್ಯುರೊ ಇಂಟರ್ ವೆನ್ಷನಲ್ ಸರ್ಜರಿ ನಿಯತಕಾಲಿಕೆಯಲ್ಲಿ ಈ ಟ್ರಯಲ್ ನ ಫಲಿತಾಂಶ ಪ್ರಕಟವಾಗಿದ್ದು, ಸೂಪರ್ ನೊವಾ ಸ್ಟೆಂಟ್ ಎಂದು ಕರೆಯಲಾಗುವ ಇದನ್ನು ಗ್ರಾವಿಟಿ ಮೆಡಿಕಲ್ ಟೆಕ್ನಾಲಜಿ ಅಭಿವೃದ್ಧಿಪಡಿಸಿದೆ ಎಂದು ಹೇಳಲಾಗಿದೆ. ಜೀವ ಉಳಿಸುವ ಪಾರ್ಶ್ವವಾಯು ಆರೈಕೆಗೆ ಪ್ರವೇಶವನ್ನು ಮರುರೂಪಿಸಬಹುದಾದ ಪ್ರಗತಿಯಲ್ಲಿ, AIIMS ನವದೆಹಲಿಯು ಸ್ಥಳೀಯವಾಗಿ ಪರೀಕ್ಷಿಸಲಾದ ಸುಧಾರಿತ ಪಾರ್ಶ್ವವಾಯು ಸಾಧನದ ಭಾರತದ ಮೊದಲ ಯಶಸ್ವಿ ಕ್ಲಿನಿಕಲ್ ಪ್ರಯೋಗವನ್ನು ಮುನ್ನಡೆಸಿತು. ಈ ಪ್ರಯೋಗವು ಉತ್ತಮ ಗುಣಮಟ್ಟದ, ಪರಿಣಾಮಕಾರಿ ಮತ್ತು ಕೈಗೆಟುಕುವ ಚಿಕಿತ್ಸೆಯನ್ನು ದೇಶದೊಳಗೆ ತಲುಪಿಸಬಹುದು ಎಂದು ತೋರಿಸಿದೆ. ಂಖಖಒಖ ನವದೆಹಲಿಯನ್ನು ರಾಷ್ಟ್ರೀಯ ಸಮನ್ವಯ ಕೇಂದ್ರ ದಾಖಲಾತಿ ತಾಣವಾಗಿ ಹೊಂದಿರುವ ಗ್ರಾವಿಟಿ ಸ್ಟೆಂಟ್–ರಿಟ್ರೈವರ್ ಸಿಸ್ಟಮ್ ಫಾರ್ ರಿಪರ್ಫ್ಯೂಷನ್ ಆಫ್ ಲಾರ್ಜ್ ವೆಸೆಲ್ ಅಕ್ಲೂಷನ್ ಸ್ಟ್ರೋಕ್‌ಟ್ರಯಲ್ (ಗ್ರಾಸ್‌ರೂಟ್), ಸೂಪರ್‌ನೋವಾ ಸ್ಟೆಂಟ್ ರಿಟ್ರೈವರ್ ಅನ್ನು ಮೌಲ್ಯಮಾಪನ ಮಾಡಿದೆ. ದೊಡ್ಡ ನಾಳಗಳ ಅಡಚಣೆಯಿಂದ ಉಂಟಾಗುವ ತೀವ್ರವಾದ ಪಾರ್ಶ್ವವಾಯುಗಳಿಂದ ಬಳಲುತ್ತಿರುವ ರೋಗಿಗಳಲ್ಲಿ ಹೆಪ್ಪುಗಟ್ಟುವಿಕೆಯನ್ನು ತೆಗೆದುಹಾಕಲು ಈ ಸಾಧನವನ್ನು ಬಳಸಲಾಗುತ್ತದೆ. ಈ ತಿಂಗಳು ಜರ್ನಲ್ ಆಫ್ ನ್ಯೂರೋಇಂಟರ್ವೆನ್ಷನಲ್ ಸರ್ಜರಿ (ಃಒಎ ಗುಂಪು) ನಲ್ಲಿ ಪ್ರಕಟವಾದ ಫಲಿತಾಂಶಗಳು, ಅತ್ಯುತ್ತಮ ಜಾಗತಿಕ ಮಾನದಂಡಗಳಿಗೆ ಹೋಲಿಸಬಹುದಾದ ಫಲಿತಾಂಶಗಳನ್ನು ತೋ-ರಿಸುತ್ತವೆ.ಬಹುಕೇಂದ್ರ ಪ್ರಯೋಗವು ಆಗಸ್ಟ್ 2024 ಮತ್ತು ಜೂನ್ 2025 ರ ನಡುವೆ ಭಾರತದ ಎಂಟು ಪಾರ್ಶ್ವವಾಯು ಕೇಂದ್ರಗಳಲ್ಲಿ 32 ರೋಗಿಗಳನ್ನು ದಾಖಲಿಸಿಕೊಂಡಿತು, ಮೊದಲ ರೋಗಿಯನ್ನು ಕಳೆದ ವರ್ಷ ಆಗಸ್ಟ್ 26 ರಂದು ಮತ್ತು ಕೊನೆಯ ರೋಗಿಯನ್ನು ಜೂನ್ 15 ರಂದು ನೇಮಿಸಲಾಯಿತು. ರೋಗಿಗಳ ಸರಾಸರಿ ವಯಸ್ಸು 58 ವರ್ಷಗಳು ಮತ್ತು ಸುಮಾರು ಮೂರನೇ ಒಂದು ಭಾಗದಷ್ಟು ಮಹಿಳೆಯರು. ಹಲವರಲ್ಲಿ ಅಧಿಕ ರಕ್ತದೊತ್ತಡ, ಮಧುಮೇಹ ಮತ್ತು ಹೃದ್ರೋಗದಂತಹ ಅಪಾಯಕಾರಿ ಅಂಶಗಳು ಇದ್ದವು.

# ಕೊರಗ ಬುಡಕಟ್ಟು ಸಮುದಾಯ ಪ್ರಥಮ ವೈದ್ಯೆ

ನೈಜ್ಯ ದೇಸೆ ನ್ಯೂಸ್



ಉಡುಪಿ: ಕೊರಗ ಬುಡಕಟ್ಟು ಸಮುದಾಯದ ಯುವತಿ ಯೊಬ್ಬರು ಮೊತ್ತ ಮೊದಲ ಬಾರಿಗೆ ವೈದ್ಯಕೀಯ ಪದವಿ ಪಡೆದು ಅಪೂರ್ವ ಸಾಧನೆ ಮಾಡಿದ್ದಾರೆ. ಕುಂದಾಪುರ ತಾಲೂಕಿನ ಉಳ್ತೂರು ಸಮೀಪದ ನಿವಾಸಿ ಗಣೇಶ್ ವಿ. ಮತ್ತು ಜಯಶ್ರೀ ದಂಪತಿಯ ಹಿರಿಯ ಪುತ್ರಿ ಡಾ.ಕೆ.ಸ್ನೇಹಾ ಮಂಗಳೂರಿನ ಎ.ಜೆ. ಮೆಡಿಕಲ್ ಕಾಲೇಜಿನಲ್ಲಿ ಎಂಬಿಬಿಎಸ್ ಪದವಿ ಪೂರೈಸಿ, ಇದೀಗ ನ್ಯೂಡೆಲ್ಲಿ ಯುನಿವರ್ಸಿಟಿ ಕಾಲೇಜ್ ಆಫ್ ಮೆಡಿಕಲ್ ಸೈನ್ಸ್‌ನಲ್ಲಿ ಎಂಡಿ ಪದವಿ ಪಡೆಯುವ ಮೂಲಕ ಸಮುದಾಯಕ್ಕೆ ಕೀರ್ತಿ ತಂದಿದ್ದಾರೆ. ಬಾಲ್ಯದಿಂದಲೂ ಕಲಿಕೆಯಲ್ಲಿ ಚುರುಕಾಗಿದ್ದ ಸ್ನೇಹಾ ಪ್ರಾಥ-ಮಿಕ ಶಾಲೆಯನ್ನು ಅಂಕೋಲಾ, ಕುಂದಾಪುರ, ಹೆಬ್ರಿಯಲ್ಲಿ ಮುಗಿಸಿದ್ದರು. ಈಕೆಯ ಪ್ರತಿಭೆ ಗುರುತಿಸಿದ ಮೂಡುಬಿದಿರೆ ಆಳ್ವಾಸ್ ಶಿಕ್ಷಣ ಪ್ರತಿಷ್ಠಾನದ ಅಧ್ಯಕ್ಷ ಡಾ.ಎಂ.ಮೋಹನ ಆಳ್ವ ಪಿಯುಸಿಗೆ ಉಚಿತವಾಗಿ ಶಿಕ್ಷಣ ವ್ಯವಸ್ಥೆ ಕಲ್ಪಿಸಿದ್ದರು. ಪಿಯುಸಿಯಲ್ಲಿ ಶೇ.96 ಅಂಕ ಪಡೆದು ಸಿಇಟಿಯಲ್ಲಿ 2,264 ಅಂಕ ಗಳಿಸಿದ ಅವರಿಗೆ ಸರಕಾರಿ ಕೋಟಾದಲ್ಲಿ ಮೆಡಿಕಲ್ ಸೀಟು ದೊರೆಯಿತು. ಆದರೆ, ತಮ್ಮೂ-ರಿನ ಹತ್ತಿರದಲ್ಲೇ ಕಲಿಕೆ ಮಾಡಬೇಕೆಂಬ ಹೆತ್ತವರ ಇಚ್ಛೆಯಂತೆ ಮಂಗಳೂರಿನ ಎ.ಜೆ. ಮೆಡಿಕಲ್ ಕಾಲೇಜಿಗೆ ದಾಖಲಾದರು. ನ್ಯೂಡೆಲ್ಲಿ ಯುನಿವರ್ಸಿಟಿ ಕಾಲೇಜ್ ಆಫ್ ಮೆಡಿಕಲ್ ಸೈನ್ಸ್‌ನಲ್ಲಿ ಎಂಡಿ ಪದವಿ ಮುಗಿಸಿ ವೃತ್ತಿ ನಿರತರಾಗಿದ್ದಾರೆ.ಗಣೇಶ್ ವಿ. ತಾಲೂಕು ಕೊರಗ ಶ್ರೇಯೋಭಿವೃದ್ಧಿ ಸಮಿತಿ ಅಧ್ಯಕ್ಷರಾಗಿದ್ದು, ನಾಲ್ಕು ದಶಕಗಳಿಂದ ಸಮುದಾಯದ ಮಕ್ಕಳ ಕಲ್ಯಾಣಕ್ಕಾಗಿ ಕೆಲಸ ಮಾಡುತ್ತಿದ್ದಾರೆ. ಕೊರಗ ಮಕ್ಕಳ ಶೈಕ್ಷಣಿಕ, ಸಾಂಸ್ಕೃತಿಕ, ಸಾಮಾಜಿ-ಕ ಉನ್ನತಿಗಾಗಿ ಕುಂಭಾಸಿಯಲ್ಲಿ ಕೊರಗ ಮಕ್ಕಳ ಮನೆ ಸ್ಥಾಪಿಸಿ ನಿರಂತರ ಸಮುದಾಯ ಜಾಗೃತಿಯಲ್ಲಿ ತೊಡಗಿಸಿಕೊಂಡಿದ್ದಾರೆ. ಶಿಕ್ಷಕಿಂ-ಯಾಗಿರುವ ಅವರ ಪತ್ನಿ ಜಯಶ್ರೀ ಕೂಡ ಸಮುದಾಯದ ಏಳಿಗೆಯಲ್ಲಿ ತೊಡಗಿಸಿಕೊಂಡಿದ್ದಾರೆ. ಅವರ ಕಿರಿಯ ಪುತ್ರಿ ಕೆ.ಸಾಕ್ಷಿ ಸಹ ಪ್ರತಿಭಾನ್ವಿತೆಯಾಗಿದ್ದಾರೆ. ಕೊರಗ ಸಮುದಾಯದ ಯುವತಿಯ ಸಾಧನೆಗೆ ವಿಧಾನಸಭಾ ಸ್ಪೀಕರ್ ಯು.ಟಿ.ಖಾದರ್ ಸಹಿತ ಅನೇಕ ಗಣ್ಯರು ಶುಭಹಾರೈಸಿದ್ದಾರೆ.

# ಆಧುನಿಕ ವಚನಗಳ ಸಂಕಲನ ನುಡಿನೈವೇದ್ಯ ಕೃತಿ ಲೋಕಾರ್ಪಣೆ



ನೈಜ್ಯ ದೇಸೆ ನ್ಯೂಸ್

**ಮಾನ್ವಿ: ಪಟ್ಟಣದ ಗ್ಯಾಲಾಕ್ಸಿ ಮೀಟಿಂಗ್ ಹಾಲ್ ನಲ್ಲಿ ನಡೆದ ಸುವರ್ಣಗಿರಿ ಪ್ರಕಾಶನ ಮಾನ್ವಿ ರವರ ಪ್ರಕಾಶನದ ಆಧುನಿಕ ವಚನಗಳ ಸಂಕಲನ ನುಡಿ ನೈವೇದ್ಯ ಕೃತಿಯನ್ನು ಜಿಲ್ಲಾ ಕಸಾಪ ಮಾಜಿ ಅಧ್ಯಕ್ಷರಾದ ಮಹಾಂತೇಶ ಮಸ್ಕಿ ಲೋಕಾರ್ಪಣೆ ಗೊಳಿಸಿ ಮಾತನಾಡಿ 12 ನೇ ಶತಮಾನದಲ್ಲಿ ಬದುಕಿಗೆ ಬೇಕಾಗಿರುವ ಬದುಕಿನಲ್ಲಿ ನುಡಿಯುವುದನ್ನೆ ನಡೆಯಾಗಿಸಿಕೊಂಡು ಬರೆದ** ಸಾಹಿತ್ಯ ಪ್ರಕಾರವನ್ನು ವಚನಗಳೇಂದು ಕರೆಯಲಾಯಿತು ಅಂದಿನ ದಿನಗಳಲ್ಲಿ ಅನೇಕರು ತಮ್ಮ ಬದುಕಿನಲ್ಲಿ ಕಂಡ ಅನುಭವಿಸಿದ ನೋವುಗಳು,ಪ್ರಸಂಗಗಳು ಪಲ್ಲಟಗೊಂಡು ವಚನಗಳ ರೂಪದಲ್ಲಿ ಬರುವುದಕ್ಕೆ ಸಾಂಸ್ಕೃತಿಕ ನಾಯಕರೆಂದು ಕರೆಸಿಕೊಳ್ಳುವ ವಿಶ್ವಗುರು ಬಸವಣ್ಣನವರು ಒಂದು ಸಮೂಹವನ್ನು ಒಗೂಡಿಸಿಕೊಂಡು ಸಾಗಿರುವುದ-ರಿಂದಲೇ ಸಾಧ್ಯವಾಗಿದೆ ಶರಣರ ವಚನಗಳನ್ನು ಸ್ಪೂರ್ತಿಯಾಗಿ ಮಾಡಿಕೊಂಡು ಅಧುನಿಕ ವಚನಗಳನ್ನು ರಚನೆ ಮಾಡುವುದಕ್ಕೆ ಸಾಹಿತಿ ಸಿದ್ದಲಿಂಗಯ್ಯನವರು ನಾಂದಿ ಹಾಡಿದನಂತರ ಅನೇಕ ಸಾಹಿತಿಗಳು ಅಧುನಿಕ ದೃಷ್ಟಿ ಕೋನದಿಂದ ವಚನಗಳನ್ನು ರಚಿಸಿದ್ದರೆ ಅದ್ದರೆ ಅವುಗಳಲ್ಲಿ ಅನುಭವದ ಹಾದಿಯಲ್ಲಿ ಬರೆದ ವಚನಗಳು ಮನಸ್ಸಿಗೆ ತಟ್ಟುವಲ್ಲಿ ಯಶಸ್ವಿಯಾಗುತ್ತವೆ. ಅದ್ದ-ರಿಂದ ಸಾಹಿತಿಗಳು ವಚನಗಳನ್ನು ಕಟ್ಟುವಾಗ ಯಾವ ಸಾಹಿತ್ಯದ ಪ್ರಭಾವಕ್ಕೆ ಒಳಗಾಗದೆ ತಮ್ಮ ಅನುಭವಗಳಿಂದ ಬರೆದಾಗ ಮಾತ್ರ ಜನ-ರಿಗೆ ತಲುಪುವುದಕ್ಕೆ ಸಾಧ್ಯವಾಗುತ್ತದೆ ಎಂದು ತಿಳಿಸಿದರು. ದಿವ್ಯಸಾನಿಧ್ಯವನ್ನು ವಹಿಸಿ ಕಲ್ಮಠದ ಶ್ರೀ ವಿರೂಪಾಕ್ಷಪಂಡಿತಾರಾಧ್ಯ ಶಿವಾಚಾರ್ಯ ಮಹಾಸ್ವಾಮಿಗಳು ಆಶೀರ್ವಾಚನ ನೀಡಿ ಶರಣ-ರು ಜಗತ್ತಿನಲ್ಲಿ ಎಲ್ಲಾವನ್ನು ಹೇಳುವುದನ್ನೆಲ್ಲ ಹೇಳಿದ್ದಾರೆ. ಅದ್ದರೆ ಇಂದು ಅವುಗಳ ಪಾಲನೆ ಮಾತ್ರ ಅಗಬೇಕಾಗಿದೆ ಇಂದು ನಮ್ಮ ಜೀವನದಲ್ಲಿ ಉತ್ತಮವಾಗಿ ಏಕೆ ಬದುಕವುದಕ್ಕೆ ಅಗುತ್ತಿಲ್ಲ ಎನ್ನುವ ವಿಷಯವನ್ನಿಟ್ಟು ಕೊಂಡೆ ವಚನಗಳು ಹುಟ್ಟಿಕೊಂಡವು,ಸಾಹಿತ್ಯ ಹುಟ್ಟಿಕೊಂಡವು, ಎಲ್ಲಿಯವರೆಗೂ ನಮ್ಮಲ್ಲಿ ಆಸೆಯೆನ್ನುವುದು ಅಳಿಯುವುದಿಲ್ಲವೇ. ಪ್ರಕೃತಿ ಜೋತೆ ಜೋತೆಗೆ ಬದುಕುವುದನ್ನು ಎಲ್ಲಿಯವರೆಗೂ ಕಲಿಯುವುದಿಲ್ಲವೊ. ಅಲ್ಲಿಯವರೆಗೆ ನಾವು ಸುಂದರವಾದ ಬದುಕನ್ನು ಕಟ್ಟಿಕೊಳ್ಳುವುದಕ್ಕೆ ಸಾಧ್ಯವಾಗುವುದಿಲ್ಲ ಎಂದು ನಮಗೆ ವಚನಗಳು ತಿಳಿಸುತ್ತವೆ ಎಂದು ತಿಳಿಸಿದರು. ಚೀಕಲಪರ್ವಿ ಶ್ರೀ ರುದ್ರಮುನೀಶ್ವರ ಮಠದ ಶ್ರೀ ಸದಾಶಿವ ಮಹಾಸ್ವಾಮಿಗಳು ಆಶೀರ್ವಾಚನ ನೀಡಿದರು. ಆಧುನಿಕ ವಚನಗಳ ಸಂಕಲನ ನುಡಿ ನೈವೇದ್ಯ ಕೃತಿಯ ಕುರಿತು ಹಿರಿಯ ಸಾಹಿತಿ ರಮೇಶಬಾಬು ಯಾಳಗಿ ಪರಿಚಯಿಸಿದರು. ಕೃತಿಯ ಲೇಖಕರಾದ ಡಾ.ಚಂದ್ರಶೇಖರ ಸುವರ್ಣಗಿರಿ ಮಠ ತಮ್ಮ ಕೃತಿಯ ಕುರಿತು ಮಾತನಾಡಿದರು. ಕಾರ್ಯಕ್ರಮದಲ್ಲಿ ಮಸ್ಕಿಯ ವೈದ್ಯರಾದ ಡಾ.ಶಿವಶರಣಪ್ಪ ಇತ್ಲಿ, ಜಿಲ್ಲಾ ಕಸಾಪ ಗೌರವ ಅಧ್ಯಕ್ಷರಾದ ತಾಯಪ್ಪ ಬಿ.ಹೊಸೂರು, ಕ.ಸಾ.ಪ.ತಾ.ಅಧ್ಯಕ್ಷರಾದ ಶರಣಬಸವ ನೀರಮಾನ್ವಿ, ಮಾಜಿ ಅಧ್ಯಕ್ಷರಾದ ಡಾ.ಬಸವಪ್ರಭು ಪಾಟೀಲ್ ಬೆಟ್ಟದೂರು, ಸಿಂಧನೂರು ಮಾಜಿ ಕ.ಸಾ.ಪ.ತಾ.ಅಧ್ಯಕ್ಷರಾದ ಪಂಪಯ್ಯಸ್ವಾಮಿ ಸಾಲಿಮಠ, ನಿವೃತ್ತ ಜಿಲ್ಲಾ ನ್ಯಾಯಾಧೀಶರಾದ ಗಿರೆಯ್ಯಪಾಟೀಲ್,ಬೆಂಗಳೂ-ರಿನ ನ್ಯೂರೋಸರ್ಜನ್ ಡಾ.ಚೈತನ್ಯ ಪ್ರಭು, ಶಂಕ್ರಪ್ಪ ಚಿಕ್ಕಗೌಡರ ಮಾಟಮಾರಿ, ಪ್ರಕಶಕರಾದ ರಾಚಮ್ಮ ಸಾಂಬಯ್ಯಸ್ವಾಮಿ, ತ್ರಯಂಬಕೇಶ ಮೇದಾ ಸೇರಿದಂತೆ ಇನ್ನಿತರರು ಇದ್ದರು.

# 9 ವರ್ಷಗಳಲ್ಲೇ ಡಿಸೆಂಬರ್ ನಲ್ಲಿ ಅತ್ಯಂತ ಕಡಿಮೆ ತಾಪಮಾನ

ನೈಜ್ಯ ದೇಸೆ ನ್ಯೂಸ್

ಬೆಂಗಳೂರು : ಉದ್ಯಾನನಗರಿ ಬೆಂಗಳೂರಿನಲ್ಲಿ ದಿನೇ ದಿನೇ ಚಳಿ ಹೆಚ್ಚಾಗುತ್ತಿದ್ದು, ಚಳಿಗೆ ಬೆಂಗಳೂರು ಮಂದಿ ತತ್ತರಿಸಿ ಹೋಗಿದ್ದಾರೆ. ಚಳಿಯಲ್ಲೂ ಬೆಂಗಳೂರು ದಾಖಲೆ ಬರೆದಿದೆ. ಹೌದು.. ಬೆಂಗಳೂರಿನಲ್ಲಿ ಕನಿಷ್ಟ ತಾಪಮಾನ 10ಡಿಗ್ರಿಗೆ ಇಳಿಕೆಯಾಗಿದ್ದು, 9 ವರ್ಷಗಳಲ್ಲೇ ಡಿಸೆಂಬರ್ ನಲ್ಲಿ ಅತ್ಯಂತ ಕನಿಷ್ಠ ತಾಪಮಾನ ದಾಖಲಾಗಿದೆ. ಇಂದು ಬೆಂಗಳೂರಿನಲ್ಲಿ ತಾಪಮಾನ 10ಕ್ಕೆ ಕುಸಿದಿದ್ದು, ಇದು ಕಳೆದ 9 ವರ್ಷಗಳಲ್ಲೇ ನಗರದಲ್ಲಿ ದಾಖಲಾದ ಅತ್ಯಂತ ಕನಿಷ್ಠ ತಾಪಮಾನವಾಗಿದೆ. ಬೆಂಗಳೂರು ದಕ್ಷಿಣದಲ್ಲಿ 10.1 ಡಿಗ್ರಿ ತಾಪಮಾನ ದಾಖಲಾಗಿದ್ದು, ಬೆಂಗಳೂರು ಗ್ರಾಮಾಂತರದಲ್ಲಿ 10.4 ಡಿಗ್ರಿ ತಾಪಮಾನ ದಾಖಲಾಗಿದೆ. ಅಂತೆಯೇ ಬೆಂಗಳೂರು ನಗರದಲ್ಲಿ 10.8 ಡಿಗ್ರಿ ತಾಪಮಾನ ದಾಖಲಾಗಿದೆ. ಅಂತೆಯೇ ಮುಂಬರುವ ವಾರದಲ್ಲಿ



ರಾತ್ರಿ ತಾಪಮಾನದಲ್ಲಿ ತೀವ್ರ ಇಳಿಕೆಯಾಗುವ ಮುನ್ಸೂಚನೆ ನೀಡಿರುವುದರಿಂದ ನಗರವು ತೀವ್ರ ಚಳಿಗಾಲಕ್ಕೆ ಸಜ್ಜಾಗುತ್ತಿದೆ.ಶುಕ್ರವಾರ ಬೆಂಗಳೂ-ರಿನಲ್ಲಿ ಕನಿಷ್ಠ ತಾಪಮಾನವು 12 ಡಿಗ್ರಿ ಸೆಲ್ಸಿಯಸ್‌ಗೆ ಇಳಿಕೆಯಾಗಿದ್ದು, ಇದು 2016 ರ ನಂತರ ಡಿಸೆಂಬರ್‌ನಲ್ಲಿ ದಾಖಲಾದ ಅತ್ಯಂತ ಕನಿಷ್ಠ ತಾಪಮಾನವಾಗಿದೆ. ಚಳಿಯೊಂದಿಗೆ ಮಂಜು ಕವಿದ ಬೆಳಗಿನ ಸಮಯ, ಒಣ ಗಾಳಿ ಮತ್ತು ಸ್ಪಷ್ಟ ಆಕಾಶ ಇರುತ್ತದೆ. ಇವು ದಕ್ಷಿಣ ಭಾರತದಲ್ಲಿ ಚಳಿಗಾಲವನ್ನು ತೀವ್ರಗೊಳಿಸುವ ಪರಿಸ್ಥಿತಿಗಳಾಗಿವೆ ಎಂದು ಹವಾಮಾನ ಇಲಾಖೆ ಹೇಳಿದೆ.ಕಳೆದ ವಾರದಲ್ಲಿ, ಬೆಂಗಳೂರಿನ ಕನಿಷ್ಠ ತಾಪಮಾನವು 16 ಲಿ ಅ ಸುತ್ತಲೂ ಇದ್ದು, ಈಗಾಗಲೇ ನಿವಾಸಿಗಳಿಗೆ ಋತುವಿನ ಚಳಿಯ ರುಚಿಯನ್ನು ನೀಡಿದೆ. ಆದ-'ರೆ ಮುಂಬರುವ ವಾರದಲ್ಲಿ ತಾಪಮಾನ ಮತ್ತಷ್ಟು ಕುಸಿತವಾಗುವ ಸಾಧ್ಯತೆ ಇದ್ದು, ತಾಪಮಾನ 12 ಲಿ ಅ ಮತ್ತು 14 ಲಿ ಅ ನಡುವೆ ಏರಿಳಿತಗೊಳ್ಳುವ ಸಾಧ್ಯತೆಯಿದೆ ಎಂದು ಖಒಆ ಅಧಿಕಾರಿಗಳು ಹೇಳಿದ್ದಾರೆ. ದೀರ್ಘಾವಧಿಯ ಡಿಸೆಂಬರ್ ಸರಾಸರಿ 16.4 ಲಿ ಅ ಗಿಂತ ಕಡಿಮೆ, ಇದು ಸಾಮಾನ್ಯಕ್ಕಿಂತ ಬಲವಾದ ಚಳಿಗಾಲವನ್ನು ಸೂಚಿಸುತ್ತದೆ. 9 ವರ್ಷಗಳಲ್ಲಿ ಕನಿಷ್ಠ ತಾಪಮಾನ ಇನ್ನು ಬೆಂಗಳೂರು ಒಂಬತ್ತು ವರ್ಷಗಳ ಹಿಂದೆ ಅಂದರೆ ಡಿಸೆಂಬರ್ 11, 2016 ರಂದು ದಾಖಲಾದ 12ಲಿಅ ಗಿಂತ ಕಡಿಮೆ ತಾಪಮಾನ ಈ ವರೆಗೆ ಬೆಂಗಳೂರಿನಲ್ಲಿ ದಾಖಲಾದ ಕನಿಷ್ಠ ತಾಪಮಾನವಾಗಿದೆ. ಆದ-'ರೆ ಡಿಸೆಬಂರ್ 12ರಂದು ಬೆಂಗಳೂರನಲ್ಲಿ ಮತ್ತೆ 12 ಡಿಗ್ರಿ ತಾಪಮಾನ ದಾಖಲಾಗಿತ್ತು. ಇದಕ್ಕೂ ಮೊದಲು ಅಂದರೆ ಗುರುವಾರ ಮುಂಜಾನೆ, ನಗರದ ಕೆಲವು ವಾರ್ಡ್‌ಗಳು ತಾಪಮಾನ ಕನಿಷ್ಟ 13.2ಲಿಅ ಯನ್ನು ದಾಖಲಿಸಿವೆ.ಬೆಂಗಳೂರಿನ ಬಾಣಸವಾಡಿ, ಥಣಿಸಂದ್ರ ಮತ್ತು ಚೌಡೇಶ್ವರಿ ಮುಂತಾದ ಪ್ರದೇಶಗಳಲ್ಲಿ ತಾಪಮಾನ ಮುಂಜಾನೆ 12 ಡಿಗ್ರಿ ದಾಖಲಾಗಿತ್ತು. ಈ ಕುರಿತು ಬೆಂಗಳೂರಿನ ಐಎಂಡಿ ಅಧಿಕಾರಿ ಸಿ.ಎಸ್. ಪಾಟೀಲ್, "ತಾಪಮಾನದಲ್ಲಿನ ಕುಸಿತವು ಶುಷ್ಕ ಗಾಳಿ, ಸ್ಪಷ್ಟ ಆಕಾಶ ಮತ್ತು ಸ್ಥಿರವಾದ ವಾತಾವರಣದ ಪರಿಸ್ಥಿತಿಗಳ ಸಂಯೋಜನೆಯಿಂದ ಉಂಟಾಗಿದೆ. ಇವೆಲ್ಲವೂ ರಾತ್ರಿಯಲ್ಲಿ ವಿಕಿರಣ ತಂಪಾಗಿಸುವಿಕೆಯನ್ನು ಸುಗಮಗೊಳಿಸುತ್ತದೆ. ಚಳಿಗಾಲದ ವಿಶಿಷ್ಟ ವಿದ್ಯಮಾನವಾದ ಈಶಾನ್ಯ ಮಾರುತಗಳು ಬಲಗೊಳ್ಳುವುದು ಸಹ ಒಂದು ಪ್ರಮುಖ ಅಂಶವಾಗಿದೆ. ಈ ಗಾಳಿಗಳು ಉತ್ತರ ಮತ್ತು ಮಧ್ಯ ಭಾರತದ ಮೇಲೆ ದಕ್ಷಿಣದ ಕಡೆಗೆ ಹೆಚ್ಚಿನ ಒತ್ತಡದ ವಲಯಗಳಿಂದ ಶೀತ, ಶುಷ್ಕ ಗಾಳಿಯನ್ನು ಒಯ್ಯುತ್ತವೆ, ಬೆಚ್ಚಗಿನ ಗಾಳಿಯ ದ್ರವ್ಯರಾಶಿಗಳನ್ನು ಸ್ಥಳಾಂತರಿಸುತ್ತವೆ ಮತ್ತು ತಾಪಮಾನದಲ್ಲಿ ತೀವ್ರ ಕುಸಿತ, ಬೆಳಗಿನ ಮಂಜು ಮತ್ತು ವರ್ಧಿತ ಗಾಳಿ–ಚಳಿ ಪರಿಣಾಮಕ್ಕೆ ಕಾರಣವಾಗುತ್ತವೆ ಎಂದು ಹೇಳಿದರು.

OWNER, PUBLISHER, PRINTER BY IRFAN K H NO. 3/117, BALAGANUR, SINDHANOOR, RAICHUR-584138 KARNATAKA AND PRINTED AT SHIVANI PRINTERS, HULKOTI, NEW COURT, OPPOSITE PLOT NO. 28 RS NO. 312/3B, GARAG COMPLEX, GADAG-582101